# 3

# ಸಭೆಯ ಉದ್ದೇಶವನ್ನು ಆಳವಾಗಿ ಅರಿತುಕೊಳ್ಳುವ ಕೇಳುಗರಿಗೋಸ್ಕರ ಪೌಲನ ಪ್ರಾರ್ಥನೆ

# (1:15-23)

ಪೌಲನು ಯೋಚಿಸಿದಂತೆ ಎಫೆಸದ ಸಹೋದರರು, ತಮಗೋಸ್ಕರ ಪ್ರಾರ್ಥಿಸಲು ಆತನು ಕೇಳಲ್ಪಟ್ಟನು. 1:15-23ರಲ್ಲಿ, ಕ್ರಿಸ್ತನ ದೇಹವಾದ, ಮಹಿಮಾಯುತ ಸಭೆಯ ಈ ಸದಸ್ಯರಿಗಾಗಿ ಆತನು ಏನೆಂದು ಪ್ರಾರ್ಥಿಸಿದನು ಎಂದು ನಾವು ನೋಡುತೇವೆ.

## ಪೀಠಿಕೆ (1:15-18)

**15ಹೀಗಿರಲಾಗಿ ಕರ್ತನಾದ ಯೇಸುವಿನಲ್ಲಿ ನೀವು ಇಟ್ಟಿರುವ ನಂಬಿಕೆಯನ್ನು ಕುರಿತೂ ದೇವಜನರೆಲ್ಲರಿಗೆ ನೀವು ತೋರಿಸುವ ಪ್ರೀತಿಯನ್ನು ಕುರಿತೂ ಕೇಳಿ ನಾನು ನಿಮ್ಮ ನಿಮಿತ್ತ ವಾಗಿ ಎಡೆಬಿಡದೆ ದೇವರಿಗೆ ಸ್ತೋತ್ರಮಾಡುತ್ತೇನೆ. 16ನನ್ನ ಪ್ರಾರ್ಥನೆಗಳಲ್ಲಿ ನಿಮ್ಮಗೋಸ್ಕರ ವಿಜ್ಞಾಪನೆಮಾಡಿ - 17ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ಪ್ರಭಾವಸ್ವರೂಪನಾದ ತಂದೆಯೂ ಆಗಿರುವಾತನು ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು ನಿಮಗೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇನೆ. 18ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ... ಎಂದು ಪ್ರಾರ್ಥಿಸುತ್ತೇನೆ.**

**ವಚನಗಳು 15, 16. ಹೀಗಿರಲಾಗಿ** ಎಂಬುದು, *dia touto*ದ ಭಾಷಾಂತರವಾಗಿದೆ, ಇದರ ಅರ್ಥವು "ಈ ಅಂಶದ ಮೇಲೆ"[1] ಎಂದಾಗಿದೆ ಮತ್ತು ಆತನು ಈಗ ಮಾತ್ರ ವಚನ 3ರಿಂದ 14ರವರೆಗೆ ಹೇಳಿದ್ದೆಲ್ಲವೂ ಸೂಚಿಸುಲ್ಪಟ್ಟಿರಬೇಕು ಅಥವಾ ಮುದ್ರೆ ಮತ್ತು ಸಂಚಕಾರದ ಬಗ್ಗೆ ವಚನಗಳು 13, 14ರ ಮೂಲಕ ಆತನು ಏನನ್ನು ಹೇಳಿದಾನೋ ಅದೇ ಮಾತ್ರ ಆಗಿರಬೇಕು. ಈ ಎರಡರಲ್ಲಿ ಒಂದು ಘಟನೆಯಲ್ಲಿ ಪೌಲನು ಎಫೆಸದ ಸಹೋದರರ ಬಗ್ಗೆ **ನಂಬಿಕೆಯನ್ನು ಕುರಿತೂ ಕೇಳಿದ್ದನು** ಮತ್ತು **ದೇವಜನರೆಲ್ಲರಿಗೆ ತೋರಿಸುವ ಪ್ರೀತಿಯನ್ನು,** ದೇವರಿಗೆ ಸ್ತೋತ್ರ ಸಲ್ಲಿಸುವುದನ್ನೂ ಮತ್ತು ತಮ್ಮ ಪ್ರಾರ್ಥನೆಯಲ್ಲಿ ವಿಜ್ಞಾಪನೆ ಮಾಡುವುದನ್ನೂ ಕೇಳಿದ್ದನು. ಈ ಸಹೋದರರು ತನ್ನ ನಂಬಿಕೆಯ ಉದ್ದೇಶವಾದ ಯೇಸುವಿನಲ್ಲಿ ಶ್ಲಾಘ್ಯವಾದ ನಂಬಿಕೆಯನ್ನು ಇಟ್ಟಿದ್ದರು ಎಂಬರ್ಥ ಬರುವಂತೆ NASBಯು ಈ ಪದವನ್ನು ಭಾಷಾಂತರಿಸುತ್ತದೆ. **ಕರ್ತನಾದ ಯೇಸುವಿನಲಿ** ಗುರುತಿಸಿಕೊಳ್ಳುವ ಇನ್ನೊಂದು ವಿಚಾರವೆಂದರೆ, ಅವರು ದೀಕ್ಷಾಸ್ನಾನ ಹೊಂದಿದಂತ ಕ್ಷೇತ್ರದಲ್ಲಿರಬೇಕು ಮತ್ತು ಅವರು ಇರುವಂಥದರಲ್ಲಿ ಮತ್ತು ಎಲ್ಲ ಆತ್ಮೀಕ ಆಶೀರ್ವಾದಗಳಲ್ಲಿ ಆನಂದಿಸುವವರಾಗಬೇಕು. ದೇವಜನರೆಲ್ಲರಿಗೆ **ನೀವು ತೋರಿಸುವ ಪ್ರೀತಿ ಯನ್ನು** ಪೌಲನು ಅನುಸರಿಸುವವನಾಗಿದ್ದು, ಇದು ದೇವಜನರು ಅವರ ಪ್ರೀತಿಯ ಉದ್ದೇಶವಾಗಿದ್ದಾರೆ ಎಂಬರ್ಥಕೊಡುವದರಿಂದ ತೆಗೆದುಕೊಳ್ಳಲ್ಪಟ್ಟಿದೆ.

ಯೇಸುವಿನಲ್ಲಿ **ನಂಬಿಕೆಯು** ಎಪೆಸದವರಲ್ಲಿ ಇರುವುದಾಗಿದ್ದು ಇದು *tēn kath humas pistin*, ವ್ಯಕ್ತಪಡಿಸಲ್ಪಟ್ಟಿದೆ, ಇದರ ಅಕ್ಷರಸಹ ಅರ್ಥವು "ನೀನು ನಂಬುದರೊಳಗಿನ ಜೊತೆಯಿರುವದು" ಅಥವಾ "ನೀನು ನಂಬುವದರ ಜೊತೆಗೆ ಇರುವುದು" ಎಂದಾಗಿದೆ.[2]

ಪೌಲನು ಅವರ "ದಿನನಿತ್ಯ ಜೀವಿತಕೋಸ್ಕರ ದಿನದಿಂದ ದಿನಕ್ಕೆ ಕ್ರಿಸ್ತ ಯೇಸುವಿನಲ್ಲಿ ತೋರಿಬರುವ ಪ್ರೀತಿಯನ್ನು" ಶ್ಲಾಘಿಸುತ್ತಾನೆ.[3] ಈ ಪ್ರೀತಿಯು "ದೇವ ಜನರಲ್ಲಿ ತೋರಿಬರುವುದಾಗಿದೆ" ಮತ್ತು ಇತರ ಕ್ರೈಸ್ತರ ಜೊತೆಯಲ್ಲಿ ಐಕತೆಯಲ್ಲಿಯೂ ಎಫೆಸದವರು ಪ್ರಾಯೋಗಿಸುವವರಾಗಿದ್ದಾರೆ. ನಮ್ಮ ಸಹೋದರರಲ್ಲಿನ ಇಂಥ ಪ್ರೀತಿಯು ಶ್ಲಾಘಿಸುವಂಥದಾಗಿದ್ದು ಯೇಸುವಿಗಾಗಿ ನಿರ್ಧಿಷ್ಟವಾಗಿ ಸೂಚಿಸಲ್ಪಟ್ಟ ಪ್ರೀತಿಯು ಇನ್ನೊಬ್ಬರಿಗೆ ಆಗಿದ್ದ ಪ್ರೀತಿಯಾಗಿದ್ದು ಇದು ಆತನ ಶಿಷ್ಯರೆಂದು ಗುರುತಿಸುವಂಥವರ ಗುರುತಿನ ಚಿನ್ಹೆಯಾಗಿದೆ (ಯೋಹಾನ 13:34, 35). "ನಂಬಿಕೆ" ಮತ್ತು "ಪ್ರೀತಿ" ಇಲ್ಲಿ ಒಟ್ಟಾಗಿ ಸೂಚಿತವಾಗಿದ್ದು 1 ಥೆಸಲೋನಿಕ 13ರಲ್ಲಿಯೂ ಕೂಡಾ ಸಿಕ್ಕುವದಾಗಿದೆ. "ನಂಬಿಕೆ" ಮತ್ತು "ಪ್ರೀತಿ" ಇವು ಪ್ರಾಚೀನ ದಾಖಲೆಗಳಲ್ಲಿ ಪದೇ ಪದೇ "ನಿರೀಕ್ಷೆ"ಯ ಜೊತೆ ಸಿಕ್ಕುವುದಾಗಿದೆ. ಪೌಲನು ಈ ಮೂರು ಪದಗಳನ್ನು ಒಟ್ಟಾಗಿ 1 ಥೆಸಲೋನಿಕ 1:3 ಮತ್ತು ಕೊಲಸ್ಸೆ 1:4, 5ರಲ್ಲಿ ಬಳಸಿದ್ದಾನೆ. ಎಫೆಸ 1 ರಲ್ಲಿ, ವಚನ 12 ಮತ್ತು 18ರಲ್ಲಿ "ನಿರೀಕ್ಷೆ"ಯ ಮತ್ತು ವಚನ 15ರಲ್ಲಿ "ನಂಬಿಕೆ" ಮತ್ತು "ಪ್ರೀತಿ" ಬಗ್ಗೆ ಮಾತನಾಡುತ್ತಾನೆ.

**ಕುರಿತು** ಕೇಳಿ ಎಂಬ ಪದವು ಎಫೆಸ ಸಭೆಯ ಬಗ್ಗೆ ಲೇಖಕನಿಗೆ ಜ್ಞಾನವೂ ಇರಲಿಲ್ಲ, ಆದ್ದರಿಂದ ಆತನು ಪೌಲನಗಿಂತಲೂ ಬೇರೆಯೇ ಇರಬೇಕು ಎಂದು ಊಹಿಸುವತ್ತ ಕೆಲ ವ್ಯಾಖ್ಯಾನಕಾರರನ್ನು ನಡೆಸುವುದಾಗಿದೆ. ಹೇಗೊ, ಎರಡು ಸತ್ಯಾಂಶಗಳು ಗಮನಿಸಲ್ಪಟ್ಟಿವೆ, ಮೊದಲು, ಪೌಲನು ಫಿಲೊಮೋನನ ಬಗ್ಗೆ ವಯಕ್ತಿಕ ಜ್ಞಾನವು ಇತ್ತು ಮತ್ತು ಆತನು ತನ್ನ "ಪ್ರೀಯನೂ ಮತ್ತು ಜೊತೆಕೆಲಸದವನೂ" ಎಂದು ಸೂಚಿಸಿದ್ದಾನೆ (ಫಿಲೊಮೋನ 1). "ಜೊತೆಕೆಲಸದವ" ಎಂಬ ಸಮಾನವಾದ ಪದವು ಮಾರ್ಕ, ಅರ್ತಿಸ್ತಾರ್ಕ, ದೇಮನು, ಮತ್ತು ಲೂಕರ ಬಗ್ಗೆ ವಿವರಿಸುವಾಗ ಪೌಲನಿಂದ ಬಳಸಲ್ಪಟ್ಟಿದೆ (ಬಹುವಚನ ರೂಪದಲ್ಲಿ) (ವಚನ 24). ಈ ಜನರು ನಿಜವಾಗಿಯೂ ಪೌಲನ ಜೊತೆ ಕೆಲಸಮಾಡಿದವರು ಎಂದು ನಾವು ಬಲ್ಲವರಾಗಿದ್ದೇವೆ. ಫಿಲೊಮೋನನು ಅದೇ ರಿತಿಯಲ್ಲಿ ಪೌಲನೊಡನೆ ವೈಯಕ್ತಿಕ ರೀತಿಯಲ್ಲಿ ಕೆಲಸಮಾಡಿದ್ದನು. ಎರಡನೆಯದಾಗಿ, ಫಿಲೊಮೋನನು ಪೌಲನಿಗೆ "ತನ್ನನ್ನು ತಾನೇ" ಕೊಡಬೇಕಾಗಿರುವುದರಿಂದ ತಾನು ಪೌಲನಿಂದ ಪರಿವರ್ತಿತವಾಗುವುದಕ್ಕೆ ಫಿಲೊಮೋನನಿಗೆ ಯಾವ ಸಂಶಯವೂ ಇರಲ್ಲಿಲ (ವಚನ 19). ಇನ್ನೂ ತಾನು ಫಿಲೊಮೋನನ ಪ್ರೀತಿ ಮತ್ತು ನಂಬಿಕೆಯ ಬಗ್ಗೆ ಕೇಳಿದ್ದೆನೆಂದು ಪೌಲನು ಹೇಳುತ್ತಾನೆ (ವಚನ 5). ಆತನ ನಂಬಿಕೆ ಮತ್ತು ಪ್ರೀತಿಯನ್ನು ಪೌಲನು ಕೇಳಿರುವದು, ಫಿಲೊಮೋನನ ಬಗ್ಗೆ ವೈಯಕ್ತಿಕ ಜ್ಞಾನವಿಲ್ಲ ಎಂದಲ್ಲ ಇದರ ಅರ್ಥವು. ಫಿಲೊಮೋನನ್ನು ಹಿಂದೆ ನೋಡಿದ್ದರಿಂದ, ಆತನ ವೃದ್ಧಿಯ ಮತ್ತು ನಂಬಿಗಸ್ತತನದ ಮುಂದುವರೆಯುವಿಕೆಯ ಬಗ್ಗೆ ಪೌಲನು ಕೇಳಿದ್ದಾನೆ ಎಂದು. ಆದ್ದರಿಂದ, ಎಫೆಸದವರ ನಂಬಿಕೆ ಮತ್ತು ಪ್ರೀತಿಯ ಬಗ್ಗೆ ಕೇಳಿದುದರ ಬಗ್ಗೆ ಪೌಲನು ಹೇಳಲ್ಪಟ್ಟಾಗ, ಅವರ ಮುಂದುವರೆದ ಕ್ರಿಸ್ತೀಯ ಜೀವನದಲ್ಲಿ ಸಮೃದ್ಧಿಯುತ ಜೀವಿತದಲ್ಲಿ ಇರುಸುವವನಾಗಿದ್ದಾನೆ.

ಅವರಿಗೋಸ್ಕರ **ಎಡೆಬಿಡದೆ ... ಸ್ತೋತ್ರಮಾಡುವವನಾಗಿದ್ದೇನೆ** ಎಂದು ಪೌಲನು ತನ್ನ ಸಹೋದರರಿಗೆ ಹೇಳುತ್ತಾನೆ. ಪೌಲನು ತನ್ನ ಪ್ರಾರ್ಥನೆಯಲ್ಲಿ ಇರುಸಲು ಜನರ ಉದ್ದನೆಯ ಪಟ್ಟಿಯ ಹೊಂದಿದ್ದನು. "ಸ್ತೋತ್ರ ಸಲ್ಲಿಸುವದು" ಇದು ಗ್ರೀಕ್ ಕ್ರಿಯಾಪದವಾದ *eucharisteō* ಆಗಿದ್ದು. ಇದರ ಅಕ್ಷರಸಹ ಅರ್ಥವು "ಒಳ್ಳೆಯ ಕೃಪೆ" ಎಂದಾಗಿದೆ.[4] ಪೌಲನು ತನ್ನ ಪತ್ರದ ಕೇಳುಗರ ತಾನು ತಿಳಿದಿರುವದರ ಬಗ್ಗೆ ನಿರಂತರವಾಗಿ ದೇವರಿಗೆ ಸ್ತೋತ್ರ ಸಲ್ಲಿಸುತ್ತಿದ್ದಾನೆ. ಆತನು ಅವರ ನಂಬಿಕೆ ಮತ್ತು ಪ್ರೀತಿ ಮತ್ತು ಅವರ ಮೂಲಕ ದೇವರು ಏನುಮಾಡುತ್ತಿದ್ದಾನೋ ಅದಕ್ಕೆ ಆತನು ಆಭಾರಿಯಾಗಿದ್ದಾನೆ.

**ವಚನಗಳು 16, 17.** ತನ್ನ ಸ್ತೋತ್ರಸಲ್ಲಿಸುವಿಕೆ ಸೇರಿಸುತ್ತಾ, ಪೌಲನು ತಾನು ಎಫೆಸೆದವರನ್ನು ನೆನಪು ಮಾಡಿಕೊಳ್ಳುವುದಾಗಿ **ಪ್ರಾರ್ಥನೆ** ಹೇಳುತ್ತಾನೆ. "ಪ್ರಾರ್ಥನೆಗಳು"

ಎಂಬುದು ಗ್ರೀಕ್ ನಾಮಪದವಾದ *proseuchē*ದ ಭಾಷಾಂತರವಾಗಿದ್ದು, ಹೊಸಒಡಂಬಡಿಕೆಯಲ್ಲಿ ಅತೀ ಹೆಚ್ಚಾಗಿ ಪದೆಪದೇ ಬಳಸಲ್ಪಟ್ಟ ಪದವಾಗಿದೆ. ವಚನಗಳಲ್ಲಿ ಬರುವಂತೆ, ದೇವರಿಗೆ ಆತನು ಮಾಡಿದ ವಿಜ್ಞಾಪನೆಗಳನ್ನು ನಾವು ನೋಡವವರಾಗಿದ್ದೇವೆ.

**ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ** ಮತ್ತು "ತಂದೆಯೂ" ಎಂಬ ಪೌಲ ಸೂಚಿಸಿದ್ದು ವಚನ 3ನ್ನು ಜ್ಞಾಪಕಕ್ಕೆ ತರುವುದಾಗಿದೆ. S. D. F. Salmond ಹೀಗೆ ಹೇಳಿದ್ದಾರೆ:

> ದೇವರ ನಿತ್ಯತ್ವದಲ್ಲಿ ಮಗನು ತಂದೆಯಿಂದ, ದಿವ್ಯತೆಯ ಒರತೆಯಿಂದ, ತನ್ನ ಜೀವವನ್ನು ಪಡೆದನು, ಮತ್ತು ಅದೇ ರೀತಿಯ ದಿವ್ಯ ಇರುವಿಕೆಯನ್ನು ಆತನು ಹೆಂದಿದಾಗಲೂ ಆಧೀನನಾಗಿರುವದು ಅಂದರೆ ಮಗನು ತಂದೆಗೆ ಆಧೀನನಾಗಿರುವಂತೆ ಇದ್ದನು. ನಮ್ಮ ಕರ್ತನ ಬಿಡುಗಡೆಯ ಸೇವೆಯಲ್ಲಿ, ನಿತ್ಯವಾದ ತಂದೆಯ ಮಗನು ಕ್ರಿಸ್ತನಾದ ದೇವರು, ಆಗಿದ್ದಾಗಲೂ, ದೇವರು ಆತನನ್ನು ಪ್ರಕಟಿಸುತ್ತಾ ಇದ್ದಾನೆ, ಆತನನ್ನು ಕಳುಹಿಸುತ್ತಾ ಇದ್ದಾನೆ [ಗಲಾತ್ಯ 4:4], ಆತನನ್ನು ಅತ್ಯುನ್ನತ್ಯ ಸ್ಥಾನಕ್ಕೆ *ಏರಿಸಿದನು* [ಫಿಲಿಪ್ಪಿ 2:9], ಆತನಿಂದ ರಾಜ್ಯವನ್ನು ಹಿಂದಕ್ಕೆ *ಪಡೆಯುವದು* [1 ಕೊರಿಂಥ 15:24] ಆಗಿದೆ. ಆತನ ಸೇವೆಗೆ ಸಂಬಂಧಿಸಿದಂತೆ, ಆತನ ಮಧ್ಯಸ್ಥಿಕೆ, ಆತನ ಅಧಿಕೃತ ಕಾರ್ಯ ಮತ್ತು ಸಂಬಂಧಗಳು, ಆತನು ತನ್ನ ದೇವರ ಹಾಗೆ ದೇವರೂ, ಆತನು ನಿಯೋಗವನ್ನು ಹೊತ್ತುಕೊಂಡವನೂ ಮತ್ತು ಬಿಡುಗಡೆಯ ಉದ್ದೇಶವನ್ನು ಆತನು ಸಂಪೂರ್ಣಗೊಳಿಸುವವನೂ ಆಗಿದ್ದಾನೆ.[5]

**ಪ್ರಭಾವ ಸ್ವರೂಪನಾದ** ತಂದೆಯೂ ಎಂಬುದು ದೇವರ ಪ್ರಭಾವದ ಮೂಲವನ್ನು ಅಥವಾ ಪ್ರಭಾವವನ್ನು ಕೊಡುವಂಥ ದೇವರನ್ನು ಸೂಚಿಸಬಹುದಾಗಿದೆ. ಈ ಪದಗಳು "ಮಹಿಮೆಯನ್ನು ಹೊಂದಿಕೊಂಡ ದೇವರು" ಎಂಬ ಅರ್ಥಕೊಡುವ ಅನಿಸಿಕೆಯಲ್ಲಿ ಯೋಗ್ಯವಾಗಿ ಕಂಡುಬರುತ್ತದೆ. Kenneth S. Wuestರ ಎಂಬರ್ಥ ಕೊಡುವಂತಿದ್ದು "ಪ್ರಭಾವ" ಎಂಬುದಕ್ಕೆ ಕಾರಣಗಳು "ಪ್ರಭಾವದ" ಎಂಬರ್ಥ ಕೊಡುವಂತಿದ್ದು "ಪ್ರಭಾವವನ್ನು ಒಳಗೊಂಡ ತಂದೆಯು ಆತನಾಗಿದ್ದಾನೆ ಎಂಬರ್ಥಕೊಡುವ"ದಾಗಿದೆ.[6] Andrew T. Lincoln ಗಮನಿಸಿದಂತೆ "ಪ್ರಭಾವ" ಮತ್ತು "ಆಗಾದವಾದ ದಿವ್ಯ ಪ್ರಸನ್ನತೆ ಮತ್ತು ಶಕ್ತಿಯ"[7] ಬಗೆಗೆ ಮಾತನಾಡುವುದಾಗಿದೆ ಮತ್ತು ಪೌಲನ ಬರವಣಿಗೆಯಲ್ಲಿನ "ಪ್ರಭಾವ" ಮತ್ತು "ಶಕ್ತಿ" ಇವುಗಳು ದೇವರ ಚಟುವಟಿಕೆಯ ಸಮಾನಾರ್ಥ ಕೊಡುವ ಪದಗಳಾಗಿವೆ. ಈ ವಿಚಾರವು ದೇವರ ಇರುವಿಕೆಯ ಪ್ರಕಾಶ - ಆತನ ದಿವ್ಯ ಸ್ವಭಾವದ - ಎಫೆಸದವರ ಮನವನ್ನು ಬೆಳಗುವ ಆತನ ಶಕ್ತಿ, ಪೌಲನು ಪ್ರಾರ್ಥಿಸಿದಂಥ ಆಶೀರ್ವಾದಗಳಲ್ಲಿ ಒಂದೂ ಆಗಿದ್ದುದರ ಜೋಡಿಸುವಿಕೆಯು ಆಗಿದೆ (1:18).

ಎಫೆಸದವರು **ತನ್ನ ವಿಷಯವಾಗಿ ತಿಳುವಳಿಕೆಯನ್ನು ಕೊಟ್ಟು ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥಗಳನ್ನು ತಿಳುಕೊಳ್ಳುವ ಜ್ಞಾನವುಳ್ಳ ಆತ್ಮವನ್ನು** ದೇವರಿಂದ ಪಡೆಯಬೇಕೆಂಬ ಆತನ ಮೂರು ಪ್ರಾರ್ಥನಾ ವಿಜ್ಞಾಪನೆಗಳು (ನೋಡಿರಿ 1:18, 19) ದೇವರಲ್ಲಿ ಅವರಿಗೆ ನೆರವೇರಿಸಲ್ಪಟ್ಟಿರಬಹುದು ಎಂದು ಪೌಲನು ಬಯಸಿದ್ದನು. ಕೆಲ ವಿಶ್ಲೇಷಣಕಾರರು "ಆತ್ಮ" ಎಂಬುದು "ಆತ್ಮನು" ಅಥವಾ "ಪರಿಶುದ್ಧಾತ್ಮನು" ಎಂದು ಯೋಚಿಸುವವರಾಗಿದ್ದಾರೆ. ಹೇಗೋ ವೇದ ಭಾಗದಲ್ಲಿ "ಆತ್ಮ" ಎಂಬುದಕ್ಕಿಂತ ಮೊದಲು ಯಾವುದೇ ಸ್ವರವು ಇಲ್ಲ ಮತ್ತು ಸಂದರ್ಭವು ದೇವರಿಗಿಂತಲೂ ಮೂರನೆಯ ವ್ಯಕ್ತಿಯ ಸೂಚನೆಯ ಬಗ್ಗೆ ಸಮರ್ಥನೆಯನ್ನು ಕೊಡುವುದಿಲ್ಲ. "ಜ್ಞಾನವುಳ್ಳ ಮತ್ತು ತಿಳುಕೊಳ್ಳುವ ಆತ್ಮವನ್ನು" ಸಹೋದರರು ಹೊಂದಬೇಕು ಹೊರತು ಆತ್ಮವು ಕೊಡುವ ಜ್ಞಾನ ಮತ್ತು ತಿಳುವಳಿಕೆಯನಲ್ಲ ಎಂಬುದು ಪೌಲನ ಇಚ್ಛೆಯಾಗಿತ್ತು. ಅದಲ್ಲದೆ, ಆತ್ಮನು ಅವರ ಜೀವಿತದಲ್ಲಿ ಒಳಗೊಂಡಿದ್ದನು, ಮತ್ತು ತನ್ನ ಜನರ ಮೂಲಕ ಸುವಾರ್ತೆ ಅರಿಯುವಂತೆ, ಮಾಡುವ ತಿಳುವಳಿಕೆಯೂ ಆಗಿತ್ತು (1 ಕೊರಿಂಥ 2:13).

ಕೊಲಸ್ಸೆ 1:9-11ರಲ್ಲಿನ ಸಮಾನವಾದ ಪರಿಚ್ಛೇದವು ಎಫೆಸದ ಈ ಭಾಗವನ್ನು ವಿವರಿಸಲು ಸಹಾಯಿಸುವುದಾಗಿದೆ. ಕೊಲಸ್ಸೆಯವರು "ಆತನ ಚಿತ್ತದ ಜ್ಞಾನದ ಜೊತೆ ಎಲ್ಲ ಆತ್ಮೀಕ ಜ್ಞಾನದಿಂದ ಮತ್ತು ಅರಿತುಕೊಳ್ಳುವಿಕೆಯಿಂದ ತುಂಬಲ್ಪಡಬೇಕೆಂಬುದು" ಪೌಲನ ಪ್ರಾರ್ಥನೆಯಾಗಿತ್ತು. ಕೊಲಸ್ಸೆಯವರು ಆತ್ಮೀಕ ಒಳನೋಟವನ್ನು ಗ್ರಹಿಸುವವರೂ ಮತ್ತು ತನ್ನ ಜೀವಿತಕ್ಕೆ ದೇವರ ಚಿತ್ತವನ್ನು ಅನ್ವಯಿಸಿಕೊಳ್ಳುವ ಜ್ಞಾನವನ್ನು ಬೆಳಸಿಕೊಂಡಿರಬಹುದು ಅಥವಾ ದೇವರನ್ನು ಸಂಪೂರ್ಣವಾದ ರೀತಿಯಲ್ಲಿ ಅರಿಯಲು ಬಂದಿರಬಹುದು.

"ಜ್ಞಾನ" (1:17; ಕೊಲಸ್ಸೆ 1:10) ಇದು *epignōsis*ಲಿಂದ ಬಂದದ್ದಾಗಿದ್ದು, "ಜ್ಞಾನದ ಮೂಲಕ ದೊಡ್ಡದ್ದು ಮತ್ತು ಹೆಚ್ಚು"[8] ಎಂಬ ಅರ್ಥವನ್ನು ಕೊಡುತ್ತದೆ. ಇದಕ್ಕೆ ಸೇರಿದ *epi* ಎಂಬುದು ಜೋಡಿಸಲ್ಪಟ್ಟದ್ದು, ದೊಡ್ಡ ಜ್ಞಾನದ ಅಂಶದೊಡನೆ ಶ್ರೇಷ್ಟ ಪಾಲ್ಗೊಳ್ಳುವಿಕೆ ಮತ್ತು ಅರಿತುಕೊಂಡವನ ಮೇಲೆ ಬಲುಯುತವಾದ ಪ್ರಭಾವವನ್ನು ಸೂಚಿಸುವುದಾಗಿದೆ.[9]

ದೇವರ ಶ್ರೇಷ್ಠ ಜ್ಞಾನವನ್ನು ನೀವು ಹೇಗೆ ಪಡೆಯುವಿರಿ? ಈ ಸಂದರ್ಭದಲ್ಲಿ ದೇವರು ಪ್ರಾರ್ಥನೆಗೆ ಉತ್ತರವಾಗಿ, ತನ್ನ ಜನರು ಅರಿತುಕೊಳ್ಳಲು ಮತ್ತು ತನ್ನ ಪ್ರಕಟಿಸಲ್ಪಟ್ಟ ಸಂದೇಶದ ಮೇಲೆ ಸರಿಯಾಗಿ ಅನ್ವಯಿಸಿಕೊಳ್ಳುವ ಜ್ಞಾನವನ್ನು ಒದಗಿಸುತ್ತಾನೆ. ದೇವರೊಡನೆಯ ಹತ್ತಿರದ ಸಂಬಂಧದಲ್ಲಿ ನಾವು ಹೆಚ್ಚಾಗಿ ಜೀವಿಸುವದು, ದೇವರನ್ನು ತಿಳುಕೊಳ್ಳುವದಕ್ಕೆ ಯೋಗ್ಯವಾದದ್ದು ಆಗಿದೆ. ಆತ್ಮೀಕ ಬೆಳವಣಿಗೆಯು ಸಮಯದೊಡನೆ ಬರುವುದಾಗಿದ್ದು, ನಾವು ಅನುಭವಿಸಿದಂತ ಉತ್ತರಿಸಲ್ಪಟ್ಟ ಪ್ರಾರ್ಥನೆಗಳು ದೇವರು ಒದಗಿಸುವಿಕೆಗಳು ಆಗಿವೆ. ಈ ವಚನದಲ್ಲಿ ಪೌಲನ ಉದ್ದೇಶವು ಎಫೆಸದವರು ಪಡೆದ ಮುಂದಿನ ಪ್ರಕಟನೆಯು ಆಗಿರಲಿಲ್ಲ ಆದರೆ ಜ್ಞಾನವನ್ನು ಅರಿತುಕೊಳ್ಳುವುದಕ್ಕೆ ಒದಗಿಸಲಾಗುವ ಮತ್ತು ಅವರು ಈಗಾಗಲೇ ಹೊಂದಿದ ದೇವರ ಸಂಪೂರ್ಣಜ್ಞಾನದೆಡೆಗೆ ಬರುವ ನಿಟ್ಟಿನಲ್ಲಿ ಪ್ರಕಟನೆಯನ್ನು ಅನ್ವಯಿಸ್ಕೊಳ್ಳುವುದಕ್ಕೆ ಆಗಿದೆ. ದೇವರ ಈ ಜ್ಞಾನದೊಡನೆ, ಅವರು ವಚನ 18 ಮತ್ತು 19ರಲ್ಲಿ ಪೌಲನು ಪ್ರಾರ್ಥಿಸಿದಂತಹ ಮೂರು ಸಂಗತಿಗಳನ್ನು ಅವರು ಹೊಂದಬಹುದಿತ್ತು.

**ವಚನ 18.** "ಹೃದಯ"ವು ಮನುಷ್ಯನ ಜ್ಞಾನದ, ಭಾವನೆಯ, ಮತ್ತು ಇಚ್ಛಾಶಕ್ತಿಯ ಪೀಠವಾಗಿದೆ. ಇದನ್ನು ಮನದಲ್ಲಿರಿಸಿ ಕೊಂಡು, ಮನುಷ್ಯನು ಹೃದಯದಲ್ಲಿ ಯೋಚಿಸುತ್ತಾನೆ (ಜ್ಞಾನೋಕ್ತಿ 23:7; KJV; ಮತ್ತಾಯ 9:4), ಹೃದಯದಿಂದ ಪ್ರೀತಿಸುತ್ತಾನೆ (ಮತ್ತಾಯ 22:37), ಮತ್ತು ಹೃದಯದಿಂದ ವಿಧೇಯವಾಗುವುದನ್ನು (ರೋಮಾಪುರ 6:17) ಬೈಬಲ್ ಯಾಕೆ ಮಾತನಾಡುತ್ತದೆ ಎಂದು ನಾವು ಅರಿತುಕೊಳ್ಳಬಹುದಾಗಿದೆ. ಪೌಲನು ನಿಮ್ಮ ಹೃದಯದ ಕಣ್ಣುಗಳ ಬಗ್ಗೆ ಮಾತಾನಾಡಿದ್ದು ಮನುಷ್ಯನ ಜ್ಞಾನದ, ಭಾವನೆಯ, ಮತ್ತು ನಾವು ಯೋಚಿಸುವ ಕಾರಣ, ಅರಿತುಕೊಳ್ಳುವಿಕೆ, ನಿರ್ಧಾರ, ಮತ್ತು ಪಡೆದಂಥ ಮಾಹಿತಿಗಳ ಮೇಲೆ ವಿವರಿಸುವ ಇಚ್ಛೆಯ ಪೀಠವಾಗಿದೆ. ಒಬ್ಬನು ದೇವರ ಸಂದೇಶವನ್ನು ಕೇಳಿದಾಗ, ಆತನು ಅದನ್ನು ಸ್ವೀಕರಿಸಬಹುದು ಅಥವಾ ತಿರಸ್ಕರಿಬಹುದು, ಆತನು ಅರಿತುಕೊಳ್ಳುವಿಕೆಯ ಮೂಲಕ ಅದನ್ನು ಸ್ವೀಕರಿಸಿದ್ದಾದರೆ, ಆತನ ಕಣ್ಣುಗಳು ತೆರೆಯಲ್ಪಟ್ಟಿವೆ ಎಂದು ನಾವು ಹೇಳಬಹುದು (ಲೂಕ 24:31). ಆತನು ಅದನ್ನು ಅಪಾರ್ಥಮಾಡಿಕೊಳ್ಳುವ ಮೂಲಕ, ಪೂರ್ವಾಗ್ರಹದಿಂದ, ಅಥವಾ ಸ್ವಭಾವದ ಕಾರಣದಿಂದ್ದ ತಿರಸ್ಕರಿಸುವವನಾಗಿದ್ದು, ಆತನ ಕಣ್ಣುಗಳು ಮುಚ್ಚಿವೆ ಅಥವಾ ಕುರುಡಾಗಿವೆ ಎಂದು ನಾವು ಹೇಳಬಹುದಾಗಿದೆ (ಮತ್ತಾಯ 13:15, 16). ಈ ರೀತಿಯಲ್ಲಿ, ಹೃದಯವು ಕಣ್ಣುಗಳು ಆಗಿದೆ. ಅಂತೆಯೆ ಪೌಲನು ಎಫೆಸದವರ ಬಗ್ಗೆ "ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ" ಎಂದು ಪ್ರಾರ್ಥಿಸುತ್ತಾನೆ.

**ಬೆಳಗಿಸಿ** ಎಂಬುದು ಎಫೆಸದವರಿಗೆ ಭವಿಷ್ಯದ ಪರಿಣಾಮದೊಡನೆ ಹಿಂದಿನದನ್ನು ಮಾಡಿದ ಕೆಲವನ್ನು ಸೂಚಿಸುವುದಾಗಿದೆ: "ಈಗ ನೀವು ಪ್ರಸ್ತುತದ ಬೆಳಗಿಸಲ್ಪಡುವ ಪರಿಣಾಮದಲ್ಲಿ ನಿಮ್ಮ ಮನೋನೇತ್ರಗಳು ಬೆಳಗಿಸಲ್ಪಡಲಿ." ಬೆಳಗುವದು ಅವರು ಸುವಾರ್ತೆಯನ್ನು ಕೇಳಿದಾಗ ಮತ್ತು ಅದಕ್ಕೆ ವಿಧೇಯರಾದಾಗ ಇದು ಕಂಡುಬರುವುದಾಗಿದೆ. ಅವರು ಈಗ ಬೆಳಗಿಸಲ್ಪಡುವ

ರಾಜ್ಯದಲ್ಲಿ ಇರುವವರಾಗಿದ್ದಾರೆ, ಪೌಲನ ಪ್ರಾರ್ಥನೆಯು ಈಗಾಗಲೇ ಅವರು ಪಡೆದಂಥ ಈ ಬೆಳಗಿನ ಅಥವಾ ಅರಿತುಕೊಳ್ಳುವಿಕೆಯ ಬೆಳವಣಿಗೆಯು ಆಗಿದೆ. "ಬೆಳಗಿಸಲ್ಪಡುವಿಕೆಯು" ಎಫೆಸದವರು ತಮ್ಮ ಪರಿವರ್ತನೆಗಿಂತ ಮುನ್ನ ಹೊಂದಿದ್ದಕ್ಕೆ ವ್ಯತ್ಯಾಸವಾದದ್ದಾಗಿದೆ. ಅವರು "ತಮ್ಮ ಅರಿತುಕೊಳ್ಳುವಿಕೆಯಲ್ಲಿನ ಕತ್ತಲೆಯಲ್ಲಿ" (4:18) ಮತ್ತು "ಹಿಂದಿನ ಕತ್ತಲೆಯಲ್ಲಿ ಇರುವವರೂ" ಆಗಿದ್ದರು; ಆದರೆ ದೇವಜನರು ಮತ್ತು ಕ್ರಿಸ್ತನಲ್ಲಿ ನಂಬಿಕೆಯುಳ್ಳವರೂ ಆದ ನಂತರ ಅವರು "ಕರ್ತನಲ್ಲಿಯ ಬೆಳಕು" ಮತ್ತು "ಬೆಳಕಿನ ಮಕ್ಕಳಾಗಿ ನಡೆಯುವವರೂ" ಆದರು (5:8).

ತೆರೆಯಲ್ಪಟ್ಟ ಕಣ್ಣುಳ್ಳವರೂ ಮತ್ತು ಕತ್ತಲೆಯಿಂದ ಬೆಳಕಿನೆಡೆಗೆ ತಿರುಗಿದವರಲ್ಲಿ ಎಫೆಸದವರು ಇರುವವರಾಗಿದ್ದರು. ಅವರು ಸೈತಾನನ ರಾಜ್ಯದಿಂದ ದೇವರೆಡೆಗೆ ತಿರುಗಿದವರು, ಪಾಪದ ಕ್ಷಮಾಪಣೆಯನ್ನು ಪಡೆಯುವ ನಿಟ್ಟಿನಲ್ಲಿ ಇದ್ದವರೂ ಮತ್ತು ಕ್ರಿಸ್ತನಲ್ಲಿ ನಂಬಿಕೆಯ ಮೂಲಕ ಪವಿತ್ರ ಮಾಡಲ್ಪಟ್ಟವರ ಸಂತತಿಯೊಳಗೆ ಇದ್ದವರು ಆಗಿದ್ದಾರೆ (ನೋಡಿರಿ ಅಪೊಸ್ತಲರ ಕೃತ್ಯಗಳು 26:18). ಅವರು ತಾವು ಪಡೆದ ಈ ಅರಿತುಕೊಳ್ಳುವಿಕೆಯಲ್ಲಿ ಬೆಳೆಯುವವರು ಆಗಿದ್ದಾರೆ.

## ದೇವರ ಕರೆಯುವಿಕೆಯ, ಆತನ ಸಂತತಿಯ ಮತ್ತು ಆತನ ಶಕ್ತಿಯ ಶ್ರೇಷ್ಟತೆ (1:18, 19)

**18ಆತನು ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರೆಯಿಕೊಂಡವರು ನಿರೀಕ್ಷಿಸುವ ಪದವಿ ಎಂಥದೆಂಬುದನ್ನೂ ದೇವಜನರೆಂಬ ಆತನ ಸ್ವಾಸ್ಥ್ಯದ ಮಹಿಮಾತಿಶಯವು ಎಂಥದೆಂಬುದನ್ನೂ ನಂಬುವವರಾದ ನಮ್ಮಲ್ಲಿ ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂಬುದನ್ನೂ ನೀವು ತಿಳುಕೊಳ್ಳುವಂತೆ ಅನುಗ್ರಹಿಸಲಿ. 19ಆತನ ಬಲಾತಿಶಯವು ಎಷ್ಟು ಮಹತ್ತಾದದ್ದೆಂಬುದು ಕ್ರಿಸ್ತನಲ್ಲಿ ತೋಲಿಬಂದಿದೆ.**

ಎಫೆಸೆದವರು ತಮ್ಮ ನಂಬಿಕೆಯಲ್ಲಿ ಬೆಳೆಯುತ್ತಾ ಪ್ರೌಢರಾಗುತ್ತಾ ಇದ್ದಂತೆಯೇ, ದೇವರ ಉದ್ದೇಶದಲ್ಲಿ ಆಳವಾದ ಅರಿತುಕೊಳ್ಳುವಿಕೆಯಲ್ಲಿ ವರು ಬರುವಂತೆ ಕೆಲಸವನ್ನು ಅವರಲ್ಲಿ ಮಾಡಲಿ ಎಂದು ಪಾಲನು ಪ್ರಾರ್ಥಿಸಿದನು. ಅವರು ಬೆಳಗಿಸಲ್ಪಡಬೇಕು ಅಥವಾ ಬಲು ಸ್ಪಷ್ಟವಾಗಿ ಮೂರು ಕ್ಷೇತ್ರಗಳಲ್ಲಿ ಅವರನ್ನು ಕಾಣಬೇಕು ಎಂದು ಆತನು ಬಯಸಿದನು. ಆದ್ದರಿಂದ ಅವರು ದೇವರ ಕರೆಯು ನಿರೀಕ್ಷೆಯು ತರುವ, ಆತನ ಸಂತತಿಯ ಮಹಿಮೆಯ ಸಂಪತ್ತಿನ ಮತ್ತು ದೇವರ ಶಕ್ತಿಯ ಶ್ರೇಷ್ಟತೆಯ ದೇವರ ಸಂಪೂರ್ಣ ಜ್ಞಾನವನ್ನು ಅರಿತುಕೊಳ್ಳಬೇಕು ಎಂದು ಆತನು ಪ್ರಾರ್ಥಿಸಿದನು.

**ವಚನ 18.** ಮೊದಲು, ತನ್ನ ಓದುಗರು ಅರದೇ ಆದ ಆಳವಾದ ಅರಿತುಕೊಳ್ಳುವಿಕೆಯ ನಿರೀಕ್ಷೆಯೆಡೆಗೆ ಬರಬೇಕು ಯಾಕೆಂದರೆ ಅದು ದೇವರ ಕರೆಯಾಗಿದೆ ಎಂದು ಪೌಲನು ಬಯಸಿದನು, ಅವರು ಬೆಳಗುವವರಾಗಬೇಕೆಂದು ತಾನು ಪ್ರಾರ್ಥಿಸಿದನು ಎಂದು ಹೇಳಿದನು "ಇದರ ಮೂಲಕ **ಆತನಿಂದ ಕರೆಯಿಸಿಕೊಂಡವರು** ನಿರೀಕ್ಷೆಯನ್ನು ನೀವು ತಿಳಿಯಬಹುದು." ಆತನಿಂದ ಕರೆಯಿಸಿಕೊಂಡವರು ಎಂಬ ಸೂಚನೆಯು ದೇವರು "ನಮ್ಮನ್ನು ಆದುಕೊಂಡ" ಸತ್ಯದ ಬಗ್ಗೆ ಮಾತಾನಾಡಿದಂತಹ (1:4) ಪತ್ರದ ಪ್ರಾರಂಭಕ್ಕೆ ತಿರುಗುತ್ತದೆ. ಇದು "ಕರೆಯಲ್ಪಟ್ಟವರಾದ ಕಾರಣ" (4:1) ಮತ್ತು "ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು" (4:4) ಎಂದು ನಂತರದಲ್ಲಿ ಪೌಲನು ಈ ಪತ್ರಿಕೆಯಲ್ಲಿ ಮಾತನಾಡಿದಂತೆ ಮುಂದಕ್ಕೂ ಸಹ ನೋಡುವುದಾಗಿದೆ. ದೇವರು ಕರೆಯು ನಿರಂಕುಶವಾಗಿಲ್ಲದಿದ್ದಾಗ, ಅದರಲ್ಲಿ ರಕ್ಷಣೆಯ ಬಗ್ಗೆ ಅವರ ಸ್ವೀಕೃತಿ ಅಥವಾ ನಿರಾಕಣೆಯ ಬಗ್ಗೆ ಇದು ಜನರಿಗಾಗಿ ಆಯ್ಕೆಯನ್ನು ಮಾಡುತ್ತಿಲ್ಲ, ಇದು ನಾವು ಆತನೊಡನೆ ಹೊಂದಿದ ಸಂಬಂಧದ ಮಾರ್ಗವನ್ನು

ತೆರೆಯುವಿಕೆಯ ಬಗ್ಗೆ ಇದು ಮಾತನಾಡುವುದಾಗಿದೆ "ಕ್ರಿಸ್ತನಲ್ಲಿ" ನಿರೀಕ್ಷೆಯುಇದೆ ಮತ್ತು ಇದು ನಮ್ಮದಾಗಿದೆ ಯಾಕೆಂದರೆ "ಆತನ ಮಹಿಮೆಯನ್ನು ಪ್ರಾಖ್ಯಾತಿಪಡಿಸಲೆಂದು" ದೇವರು ನಮಗೆ ಇದನ್ನು ಕೊಟ್ಟನು (1:12).

ಎಫೆಸದವರ ಪಾಪಮಯ ಸ್ಥಿತಿಗೆ ವ್ಯತ್ಯಾಸವಾಗಿ, ಪೌಲನು ಬರೆದಂತೆ, ಅವರು ತಮ್ಮ ಪೂರ್ಣ ಬಾಧ್ಯತೆಯ ನಿರೀಕ್ಷೆಯಲ್ಲಿ ಇದ್ದರು (1:11-14). ಅವರ ನಿರೀಕ್ಷೆಯು ಪರಲೋಕದ್ದಾಗಿತ್ತು (ಕೊಲಸ್ಸೆ 1:5), ಅವರ ಸುವಾರ್ತೆಯನ್ನು ಸ್ವೀಕರಿಸಿದ್ದರ ಜೊತೆಗೆ ಬರುವ ವಾಗ್ದಾನಗವಾಗಿತ್ತು (ಕೊಲಸ್ಸೆ 1:23). **ನಿರೀಕ್ಷೆಯು** (*elpis*) "ಅದು ದೊರಕುವದನ್ನು ನಿರೀಕ್ಷಿಸುವ ಕೆಲ ಒಳ್ಳೆಯ ಇಚ್ಛೆ" ಇದಾಗಿದೆ.[10] ಈ ಕ್ರೈಸ್ತರು ಕೇವಲ ಪರಲೋಕದ ಇಚ್ಛೆಯುಳ್ಳವರಾಗಿರುವುದಿಲ್ಲ, ಆದಗೆ ದೇವರ ವಾಗ್ದಾನದ ಕಾರಣದಿಂದ ಜೀವಿಸಲು ಆಶಿಸುವವರಾಗಿದ್ದಾರೆ. ನಿರೀಕ್ಷೆಯು ಕೇವಲ ಇಚ್ಛೇಯಲ್ಲ: ಸತ್ಯವೇದದ ದೃಷ್ಟಿಯಿಂದ ಅಲ್ಲಿಗೆ ಹೋಗುವ ಯಾವುದೇ ನಿರೀಕ್ಷೆಯನ್ನು ಹೊಂದಿರದೆ ಪರಲೋಕದ ಇಚ್ಛೇಯುಳ್ಳವನು ಎಂದಾಗಿದೆ. ನಿರೀಕ್ಷೆಯು ಕೇವಲ ಆಶೆಯಲ್ಲ: ಇದು ಆ ಸ್ಥಳವನ್ನು ಆಕ್ರಮಿಸುವದಕೋಸ್ಕರ ಯಾವುದೇ ಇಚ್ಛೆಯಿಲ್ಲದೆ ಭಯಂಕರತೆಯು ಸಂಭವಿಸುವ ಕೇಲವನ್ನು ಒಬ್ಬನ್ನು ಆಶಿಸುವಂಥದ್ದಾಗಿದೆ. ನಿರೀಕ್ಷೆಯು ಇಚ್ಛೆ ಮತ್ತು ಆಶೆ ಎರಡೂ ಆಗಿದೆ. ಈ ನಿರೀಕ್ಷೆಯು, ದೇವರ ವಾಕ್ಯದಲ್ಲಿ ಕಂಡುಬಂದಿದ್ದು ಕ್ರೈಸ್ತನು ಈ ಜೀವಿತದಲ್ಲಿ ತೊಂದರೆಗಳನ್ನು ಎದುರಿಸುವಾಗ "ಆತ್ಮದ ಸುರಕ್ಷಿತವೂ ಆಗಿದ್ದು ಖಚಿತವೂ ಮತ್ತು ನಿಶ್ಚಲವೂ ಆಗ್ದ ನಿರೀಕ್ಷೆಯೂ" ಆಗಿದೆ (ಇಬ್ರಿಯ 6:19). "ಆತನ ಕರೆಯುವಿಕೆಯಲ್ಲಿ" ತನ್ನ ಓದಿಗರು ಬೆಳೆಯಬೇಕೆಂದು ಪೌಲನು ಬಯಸುವವನಾಗಿದ್ದಾನೆ.

ಎರಡನೆಯದಾಗಿ, "ದೇವಜನರೆಂಬ ಆತನ ಸ್ವಾಸ್ಥದ ಮಹಿಮಾತಿಶಯವು ಎಂಥದ್ದೆಂದು" ಎಫೆಸದವರು ತಿಳಿಯುವವರಾಗಬೇಕೆಂದು ಪೌಲನು ಪ್ರಾರ್ಥಿಸಿದನು (1:18). ಪೌಲನು ಈಗಾಗಲೇ "ಬಾಧ್ಯಸ್ಥರು" ಎಂಬ ಪದವನ್ನು 1ನೆಯ ಅಧ್ಯಾಯದಲ್ಲಿ ಎರಡು ರೀತಿ ಯಲ್ಲಿ ಬಳಸಿದ್ದಾನೆ. ದೇವಜನರು ದೇವರ ಬಾಧ್ಯಸ್ಥರಾಗಿದ್ದಾರೆ (ನೋಡಿರಿ 1:11), ಮತ್ತು ಪರಿಶುದ್ಧಾತ್ಮನು ಕ್ರೈಸ್ತರಿಗೆ ವರವಾಗಿ ಬಂದಂಥ "ನಮ್ಮ ಬಾಧ್ಯಸ್ಥಿಕೆಗೆ ಸಂಚಕಾರವಾಗಿದ್ದಾನೆ" (1:14). "ದೇವಜನರೆಂಬ ಆತನ ಸ್ವಾಸ್ಥ" ಎಂದು ಪೌಲನು ಮಾತನಾಡುವಾಗ ಹಿಂದಿನದು ಒಂದು ವೇಳೆ ಪೌಲನ ಮನದಲ್ಲಿ ಇದ್ದುದಾದರೆ, ಆಗ ಅವರು ದೇವರ ದೃಷ್ಟಿಯಲ್ಲಿ **ಎಷ್ಟು ಅತಿಶಯವಾದದ್ದೆಂಬುದನ್ನೂ** ಎಂದು ಅವರು ತಿಳಿಯಬೇಕೆಂದು ಆತನು ಬಯಸಿದ್ದನು. "ಬಾಧ್ಯಸ್ಥರು" ಎಂದು ಪೌಲನು ನಂತರದ ಅರ್ಥದಲ್ಲಿ ಬಳಸಿದ್ದಾದರೆ, ಆಗ ಆತನು ಮುಂದಿನ ಜಗತ್ತಿನಲ್ಲಿ ದೇವರು ಅವರಿಗಾಗಿ ಕೂಡಿಟ್ಟಂತಹ **ಮಹಿಮೆಯನ್ನು** ಸ್ವಾಸ್ಥಕೋಸ್ಕರ ಸಂಪೂರ್ಣ ಸ್ತುತಿಯೊಡನೆ ಅವರು ಬರಬೇಕೆಂದು ಆತನು ಬಯಸಿದನು. ವಚನ 14ರಲ್ಲಿ ಪೌಲನು ಹೇಳಿದ್ದುದರ ಆಧಾರದ ಮೇಲೆ, ದೇವಜನರಿಗೋಸ್ಕರ ಇರುವ ಮಹಿಮಾಯುತ ಸ್ವಾಸ್ಥದ ಶ್ರೇಷ್ಟ ತಿಳುವಳಿಕೆಗಾಗಿ ಆತನು ಪ್ರಾರ್ಥಿಸುವಾಗ ನಂತರದ ಅಂಶವು ಆತನ ಮನದಲ್ಲಿ ಇತ್ತು ಎಂದು ಕಂಡುಬರುತ್ತದೆ.

**ವಚನ 19.** "ಮಹೀಮಾತಿಶಯವು ಎಂಥದೆಂಬುದನ್ನು ನಂಬುವವರಾದ ನಮ್ಮಲ್ಲಿ ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂಬುದನ್ನೂ" ಎಫೆಸದವರು ತಿಳಿದುಕೊಳ್ಳಬೇಕೆಂದು ಸಹ ಪೌಲನು ಬಯಸಿದನು. ಈ ಕ್ರೈಸ್ತರಿಗಾಗಿ ಇದು ಮೂರನೆಯ ಪ್ರತಿಪಾದನೆಯು ಆಗಿತ್ತು. ಇದು ಬಲಯುತವಾದ ಪದಗಳಿಂದ ತುಂಬಿತ್ತು; ತನ್ನ ಓದುಗರು ದೇವರ **ಶಕ್ತಿಯ** ಶ್ರೇಷ್ಟ ಸ್ತುತಿಯೆಡೆಗೆ ಬರಬಹುದು ಎಂಬುದು ಪೌಲನ ಪ್ರಾರ್ಥನೆಯಾಗಿತ್ತು.

ಅಪೊಸ್ತಲನು ಈ ಪತ್ರಿಕೆಯಲ್ಲಿ ಈ ಶಕ್ತಿಯನ್ನು ನಾಲ್ಕು ಪದಗಳಲ್ಲಿ ಬಳಸಿದ್ದಾನೆ. ಆತನು "ಶಕ್ತಿಯನ್ನು" ದೇವರ **ಅತಿಶಯವಾದ ಶ್ರೇಷ್ಟತೆ** (*huperballon megethos*) ಎಂದು ಸೂಚಿಸುವುದರ ಮೂಲಕ ಪರಿಚಯಿಸುವವನಾಗಿದ್ದಾನೆ. "ಉತ್ಕೃಷ್ಟತೆಯನ್ನು ಮೀರಿದ ..." ಎಂಬುದನ್ನು ಅಳತೆಯನ್ನು ಮೀರಿದ ಮಿಗಿಲಾದ ರೀತಿಯ ಶ್ರೇಷ್ಟತೆ, ಸಾಕಷ್ಟು ಶ್ರೇಷ್ಟತೆಗಿಂತ

ಹೆಚ್ಚಾದದ್ದು ಮತ್ತು ಶಕ್ತಿಯನ್ನು ಇದು ಒಳಗೊಂಡಿದೆ.[11] ದೇವರ ಶಕ್ತಿಯು ಮಿತಿಯನ್ನು ಮೀರಿದ್ದಾಗಿದೆ, ಇಲ್ಲಿ ಬಳಸಲಾದ "ಶಕ್ತಿ"ಯ ನಾಲ್ಕು ಪದಗಳು *dunamis* ಆಗಿದ್ದು, "ನೈಸರ್ಗಿಕ ಸಾಮರ್ಥ, ಸುಪ್ತವಾಗಿರುವ ಶಕ್ತಿ" ಗೋಸ್ಕರದ ಗ್ರೀಕ್ ಪದವು; *energeia* **ಕೆಲಸ ಮಾಡುವದು** ಎಂದು ಭಾಷಾಂತರವಾಗಿದ್ದು ಇದರ ಅರ್ಥ "ಶಕ್ತಿ, ಕಾರ್ಯದಲ್ಲಿರುವ ಶಕ್ತಿ" ಎಂದಾಗಿದೆ; ಮತ್ತು *ischus*, ಬಲ ಎಂದು ಭಾಷಾಂತರವಾಗಿದ್ದು "ಶಾರೀರ ಶಕ್ತಿಯ ನಿಧಿ" ಎಂದು ಸೂಚಿಸಲ್ಪಟ್ಟಿದೆ; ಮತ್ತು *kratos* ಕ್ರಿಯಾಪದವು ಅತಿಶಯವಾದ ಎಂದು ಭಾಷಾಂತರವಾಗಿದ್ದು, "ಪರಿಣಾಮದಲ್ಲಿ ಶಕ್ತಿ" ಎಂಬರ್ಥವನ್ನು ಕೊಡುವುದಾಗಿದೆ.[12] ಈ ನಾಲ್ಕು ಅಂಶಗಳನ್ನು **ಒಟ್ಟಿಗೆ** ಇಡುವುದರ ಮೂಲಕ, ಅಸಂಖ್ಯಾತ ಪರಿಣಾಮಗಳ ಬಗ್ಗೆ ಆತನು ಕಾರ್ಯಮಾಡುವ ಮೂಲಕ ಬಾಧ್ಯಸ್ಥಿಕೆಯ ಶಕ್ತಿಯನ್ನು ದಾನವಾಗಿ ಕೊಡುವವನು ದೇವರೆ ಆಗಿದ್ದಾನೆ ಎಂದು ಪೌಲನು ಮಾತನಾಡುತ್ತಾನೆ. ಎಫೆಸದವರ ದೇವರ ಶಕ್ತಿಯ ನಿರೀಕ್ಷೆಯಲ್ಲಿ ಮತ್ತು ಬಾಧ್ಯತೆಯಲ್ಲಿ ಪೌಲನು ಸೇರಿಸುವುದರಿಂದ, ಆತನ ಪ್ರಕಾರ ಅವರ ನಿರೀಕ್ಷೆಯನ್ನು ದೇವರನ್ನು ನಿರಾಶೆ ಮಾಡುವುದಕ್ಕೆ ಅಥವಾ ಅವರ ಬಾಧ್ಯತೆಯನ್ನು ಕೊಡುವಲ್ಲಿ ವಿಫಲನಾಗುವುದಕ್ಕೆ ಯಾವುದೆ ರೀತಿಯ ಅವಕಾಶವೆ ಇಲ್ಲ ಎಂಬುದಾಗಿದೆ. ದೇವರು ತಾನು ವಾಗ್ದಾನ ಮಾಡಿದ್ದನ್ನು ಮಾಡುವುದಕ್ಕೆ ಶಕ್ತಿಯುತನಾಗಿದ್ದಾನೆ!

**ನಂಬುವವರಾದ ನಮ್ಮಲ್ಲಿ** ಅದ್ಭುತವಾದ ದೇವರ ಶಕ್ತಿಯ ಇರುವುದಾಗಿದೆ. "ಅಲ್ಲಿ" ಎಂಬುದು ಗ್ರೀಕ್ ಭಾಷಾಂತರವಾದ *eis* ಎಂಬ ವಿಶೇಷಣದಿಂದ ಬಂದದ್ದಾಗಿದ್ದು, ದೇವರ ಶಕ್ತಿಯು ನಂಬಿಕೆಯಲ್ಲಿ ಮುಂದುವರೆಯುತ್ತಾರೋ, ಅವರಿಗೆ ಅವರ ನಿರೀಕ್ಷೆಯ ಮತ್ತು ಬಾಧ್ಯತೆಯ ಬಗ್ಗೆ ಖಚಿತತೆಯನ್ನು ಕೊಡುತ್ತಾ ಅವರಲ್ಲಿ ಶಕ್ತಿಯು ಸಾಕ್ಷಿಯಾಗಿರುವುದನ್ನು ತೋರಿಸುವುದಾಗಿದೆ. "ನಂಬುವವರ" ಇದು ನಿರಂತರ ಕಾರ್ಯದ ಕ್ರಿಯಾಪದವಾಗಿದೆ.

ತನ್ನ ಸಹೋದರರು ಬೆಳಕಿನವರಾಗಬೇಕು ಎಂದು ಬಯಸುತ್ತಾ ಪೌಲನು ಮೂರು ಕ್ಷೇತ್ರಗಳನ್ನು ಪರಿಗಣಿಸುವವನಾಗಿದ್ದಾನೆ.

## ದೇವರ ಶಕ್ತಿಯು ಪ್ರಾಯೋಗಿಸಲ್ಪಟ್ಟದ್ದು
## (1:20-23)

**20ಆತನ ಬಲಾತಿಶಯವು ಎಷ್ಟು ಮಹತ್ತಾದದ್ದೆಂಬದು ಕ್ರಿಸ್ತನಲ್ಲಿ ತೋರಿಬಂದಿದೆ. 21ಹೇಗೆಂದರೆ ಆತನು ಸತ್ತಿದ್ದ ಕ್ರಿಸ್ತನನ್ನು ಬದುಕಿಸಿ ಪರಲೋಕದೊಳಗೆ ಸಕಲ ರಾಜತ್ವ ಅಧಿಕಾರ ಮಹತ್ವ ಪ್ರಭುತ್ವಾದಿಗಳ ಮೇಲೆಯೂ ಈ ಲೋಕದಲ್ಲಿ ಮಾತ್ರವಲ್ಲದೆ ಬರುವ ಲೋಕ ದಲ್ಲಿ ಸಹ ಹೆಸರುಗೊಂಡವರೆಲ್ಲರ ಮೇಲೆಯೂ ತನ್ನ ಬಲಗಡೆಯಲ್ಲಿ ಕೂಡ್ರಿಸಿಕೊಂಡನು. 22ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. 23ಸಭೆಯು ಆತನ ದೇಹವಾಗಿದೆ; ಎಲ್ಲವನ್ನೂ ಆತನ ಸಂಬಂಧದಲ್ಲಿ ವ್ಯಾಪ್ತಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ.**

ಪೌಲನ ಪ್ರಾರ್ಥನೆಯು ವಚನ 20ರಿಂದ 23ರವರೆಗೆ ಮುಂದುವರೆಯುತ್ತದೆ. ಎಫೆಸದವರಿಗಾಗಿ ಆತನ ಪ್ರೀತಿಯು ಸಾಕ್ಷಿಯಾಗಿದೆ, ಮತ್ತು ದೇವರಲ್ಲಿನ ಆತನ ನಂಬಿಕೆಯು ಅವರಿಗಾಗಿ ಆತನ ತಾಳ್ಮೆಯಲ್ಲಿ ಹೊಳೆಯುವುದಾಗಿದೆ.

**ವಚನ 20.** ಕ್ರಿಸ್ತನ ಪುನರುತ್ಥಾನದಲ್ಲಿ ಹೆಚ್ಚು ಸಂಪೂರ್ಣವಾಗಿ ಪ್ರಾಯೋಗಿತವಾದ ದೇವರ ಶಕ್ತಿಯನ್ನು ಈ ಸಹೋದರರು ಪ್ರಶಂಸಿಸುವುದನ್ನು ಪೌಲನು ಬಯಸುವವನಾಗಿದ್ದಾನೆ.

[ದೇವರದ್ದು] "ಕ್ರಿಸ್ತನಲ್ಲಿ ತೋರಿಬಂದಿದೆ ... ಆತನು ಸತ್ತಿದ್ದ ಕ್ರಿಸ್ತನನ್ನು ಬದುಕಿಸಿ" ಎಂಬಲ್ಲಿ ನಮ್ಮ ವೇದಭಾಗವು ಶಕ್ತಿಯುತ ಕಾರ್ಯದ ಬಗ್ಗೆ ಮಾತಾನಾಡುವದಾಗಿದೆ. **ತೋರಿ ಬಂದಿದೆ** ಎಂಬುದು ಗ್ರೀಕ್ ಕ್ರಿಯಾಪದದ *energeō* ಭಾಷಾಂತರವಾಗಿದ್ದು, "ಕ್ರಿಯಾತ್ಮಕ

ವಾಗಿರು" ಎಂಬ ಅರ್ಥನ್ನು ಕೊಡುವುದಾಗಿದೆ.[13] ಸಾಮಾನ್ಯ ಭೂತಕಾಲದ ನಿರ್ದೇಶಕ ಕ್ರಿಯಾಪದವು ಭೂತಕಾಲದಲ್ಲಿ ಒಂದು ಸಂಗತಿ ಸಂಭವಿಸಿದೆ ಎಂದು ತೋರಿಸುವದಾಗಿದೆ. ದೇವರು ಶಕ್ತಿಯುತವಾದ ರೀತಿಯಲ್ಲಿ ಭೂತಕಾಲದಲ್ಲಿ ಕಾರ್ಯಮಾಡಿದ್ದಾನೆ ಮತ್ತು ತನ್ನ ಜನರ ನಿರೀಕ್ಷೆಗಳನ್ನು ಸಂಪೂರ್ಣ ಮಾಡುವದಕೋಸ್ಕರ ಭವಿಷ್ಯದಲ್ಲಿ ಶಕ್ತಿಯುತವಾಗಿ ಕಾರ್ಯನಿರ್ವಹಿಸುವವನಾಗಿದ್ದಾನೆ ಎಂಬ ಭರವಸೆಯನ್ನು ಕೊಡುವದಾಗಿದೆ. ಕ್ರಿಸ್ತನಲ್ಲಿ ಕಾರ್ಯರೂಪಕ್ಕೆ ಬಂದ ದೇವರ ಶಕ್ತಿಯನ್ನು ಹೊಂದುವ ಬಗ್ಗೆ ಮಾತನಾಡುವಾಗ, ಪೌಲನು ನಂತರದಲ್ಲಿ ಯಾವ ಶಕ್ತಿಯು ಸಂಪೂರ್ಣವಾಯಿತು ಎಂದು ಹೇಳುದ್ದಾನೆ ಅದು **ಆತನು ಸತ್ತಿದ್ದ ಕ್ರಿಸ್ತನನ್ನು ಬದುಕಿಸಿದೆ** ಆಗಿದೆ. ಕ್ರಿಸ್ತನ ಪುನರುತ್ಥಾನವು ಯೇಸುವಿನ ದಿವ್ಯತೆಯ ಕಿರೀಟ ಮಯ ಆಧಾರವಾಗದೆ (ನೋಡಿರಿ ರೋಮಾಪುರ 1:4). ಆತನ ಪುನರುತ್ಥಾನವು ದೇವರ ಶಕ್ತಿಯ ಶ್ರೇಷ್ಟತೆಯ ಪ್ರಾಯೋಗವಾಗಿದೆ. ಕೊಲಸ್ಸೆ 2:12ರಲ್ಲಿ ಅಪೊಸ್ತಲರು ನಾಮಪದವಾದ *energeia*ನ್ನು ಯೇಸು ಮರಣದಿಂದ ಏಳುವುದರ ಜೊತೆಗೆ ಮತ್ತು ದೀಕ್ಷಾಸ್ನಾನದಿಂದ ವಿಶ್ವಾಸಿಗಳು ಏಳುವುದರ ಜೊತೆಗೆ ಜೋಡಿಸಿ ಮಾತನಾಡಿದ್ದಾನೆ. ಮರಣದಿಂದ ಏಳಲು ಅವಶ್ಯವಿರುವದು ಶ್ರೇಷ್ಟಶಕ್ತಿ ಮತ್ತು ಈ ಶ್ರೇಷ್ಟಶಕ್ತಿಯು ದೇವರಿಗೆ ಹೊಂದಿಕೊಡಿರುವುದು ಆಗಿದೆ.

ಆತನು ಕೇವಲ ಕ್ರಿಸ್ತನನ್ನು ಮರಣದಿಂದ ಎಚ್ಚಿಸಲಿಲ್ಲ ಆದರೆ ಆತನನ್ನು ಉನ್ನತಿಗೆ ಏರಿಸಿದನು ಎಂದು ಹೇಳುವ ಮೂಲಕ ಪೌಲನು ಮುಂದೆ ದೇವರ ಶಕ್ತಿಯನ್ನು ಒತ್ತಿಹೇಳುತ್ತಾನೆ: **ಪರಲೋಕದೊಳಗೆ … ತನ್ನ ಬಲಗಡೆಯಲ್ಲಿ ಕೂಡ್ರಿಸಿಕೊಂಡನು.** "ಕೂಡ್ರಿಸಿದನು" ಎಂಬುದು ಬಿಡುಗಡೆಯ ಕಾರ್ಯವು ಸಂಪೂರ್ಣವಾದದ್ದನ್ನು ಸೂಚಿಸುವುದಾಗಿದೆ, ಆದರೆ ಇದು ಮನ್ನಣೇಯ ಸ್ಥಳ, ಮಹಿಮೆ, ಮತ್ತು ಅಗಾಧತೆಯನ್ನು ಕೂಡಾ ಸೂಚಿಸುವುದಾಗಿದೆ ಯಾಕೆಂದರೆ ಅದು ದೇವರ "ಬಲಗಜೇಯಲ್ಲಿ" ಕೂಡ್ರುವದು ಆಗಿದೆ, ಹಳೆಒಡಂಬಡಿಕೆಯಲ್ಲಿ, ದೇವರ ಬಲಗಡೆಯು ಯೋಗ್ಯತೆಯ, ವಿಜಯದ, ಮತ್ತು ಶಕ್ತಿಯ ಸ್ಥಾನವನ್ನು ಸೂಚಿಸುವುದು ಆಗಿತ್ತು (ಕೀರ್ತನೆ 80:17; 20:6; 89:13). ಕ್ರಿಸ್ತನನ್ನು ಮಹಿಮೆಪಡಿಸಿದ ಶಕ್ತಿಯು ಎಫೆಸದವರಲ್ಲಿ ಲಭ್ಯವಿದ್ದು ಅವರ ನಿರೀಕ್ಷೆ ಸಂಪೂರ್ಣಗೊಳಿಸುವದು ಮತ್ತು ಅವರನ್ನು ಬಾಧ್ಯತೆಯತ್ತ ತರುವದು ಆಗಿದೆ ("ಪರಲೋಕ ದೊಳಗೆ" ಎಂಬುದಕ್ಕೆ 1:3ರ ಮೇಲಿನ ವ್ಯಾಖ್ಯಾನವನ್ನು ನೋಡಿರಿ).

**ವಚನ 21.** ಕ್ರಿಸ್ತನ ಉನ್ನತೀಕರಿಸುವಿಕೆಯು ದೇವರ ಶ್ರೇಷ್ಟಶಕ್ತಿಯ ಮೂಲಕ ಸಾಧ್ಯವಾಗುವುದಾಗಿದೆ ಎಂದು ಪೌಲನು ಒತ್ತಿ ಹೇಳುತ್ತಾನೆ. ನಂತರದಲ್ಲಿ ಆತನು **ಸಕಲ ರಾಜತ್ವ** (*archē*) **ಅಧಿಕಾರ** (*exousia*) **ಮಹತ್ವ ಪ್ರಭುತ್ವಾದಿಗಳ** (*dunamis*) **ಮೇಲೆಯೂ ಈ ಲೋಕದಲ್ಲಿ** (*kuriotēs*) ಎಂದು ಘೋಷಿಸುವವನಾಗಿದ್ದಾನೆ. ಮೊದಲೆರಡು ಈ ಗ್ರೀಕ್ ಪದಗಳು ಪೌಲನಿಂದ 3:10 ಮತ್ತು 6:12ರಲ್ಲಿ ಸಹ ಬಳಸಲ್ಪಟ್ಟಿವೆ. ಈ ವೇದಭಾಗಗಳ ಪ್ರಕಾರ, "ಅರಸರ" ಮತ್ತು "ಅಧಿಕಾರಿಗಳ" ಬಗೆಗಿನ ದೇವರ ಜ್ಞಾನವನ್ನು ಮತ್ತು "ಅರಸರ" ಮತ್ತು "ಅಧಿಕಾರಿಗಳ" ವಿರುದ್ಧ ಕ್ರೈಸ್ತರ ಯುದ್ಧಗಳನ್ನು ಸಭೆಯು ತಿಳಿಯುವಂತೆ ಮಾಡುವುದು ಆಗಿದೆ ("ಅಧಿಕಾರಿಗಳು"; KJV). ಇದೇ ರೀತಿಯ ಗ್ರೀಕ್ ಪದಗಳು ಕೊಲಸ್ಸೆ 2:10 ಮತ್ತು 2:15ರಲ್ಲಿ ಸಿಕ್ಕುವವುಗಳು ಆಗಿವೆ. ಅಲ್ಲಿ ಕ್ರಿಸ್ತನು "ಆಳುವ" ಮತ್ತು "ಅಧಿಕಾರ" ಇವುಗಳ ಮೇಲೆ ಅಧಿಕಾರ ಹೊಂದಿದ್ದು "ಅರಸನ" ಮತ್ತು "ಅಧಿಕಾರಿಗಳ" ನಿಶಸ್ತ್ರೀಕರಣವನ್ನು ಹೊಂದುವದು ಆಗಿದೆ. ರೋಮಾಪುರ 8:38, 39ರ ಪ್ರಕಾರ ಸಂಸ್ಥಾನಗಳ *archē* ಅಥವಾ ದೇವರ ಪ್ರೀತಿಯಿಂದ ಬೇರೆಮಾಡುವ ಯಾವುದೇ ಸಂಗತಿಗಳು ಆಗಿರಬಹುದು. ಕೊರಿಂಥದವರ ಬರವಣಿಗೆಯಲ್ಲಿ, ಪೌಲನು ಕೊನೆಯ ಸಮಯದ ಬಗ್ಗೆ ಅಂದರೆ ದೇವರ ರಾಜ್ಯವನ್ನು ಬಿಡುಗಡೆ ಮಾಡಿದಾಗ ಮತ್ತು "ಎಲ್ಲ ಅರಸರ ಮತ್ತು ಅಧಿಕಾರಿಗಳ ಮತ್ತು ಬಲವನ್ನು" ನಿರ್ಮೂಲ ಮಾಡುವುದರ ಬಗ್ಗೆ ಮಾತನಾಡುದ್ದಾನೆ (1 ಕೊರಿಂಥ 15:24). ಕೊಲಸ್ಸೆ

1:16 "... ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟವು" ಎಂದು "ದೊರತನಗಳ" ಮತ್ತು "ಅಧಿಕಾರಿಗಳ" ಪಟ್ಟಿಯನ್ನು ಮಾಡುವುದಾಗಿದೆ.

"ದೊರೆತನ" (*kuriotēs*) ಮತ್ತು "ಅಧಿಕಾರ" (*dunamis*) ಎಂಬುವು 2 ಪೇತ್ರ 2:10, 11ರಲ್ಲಿ ಸೂಚಿಸಲಾಗಿದೆ. ಕೊಲಸ್ಸೆ 1:16 ಸಹ "ದೊರೆತನ" (*kuriotēs*), "ಪ್ರಭುತ್ವ" (*archē*) ಮತ್ತು "ಅಧಿಕಾರ" (*exousia*) ಇವನ್ನು ಸಹ ಮಾತನಾಡುವುದಾಗಿದೆ. "ಆಳ್ವಿಕೆ," "ಪ್ರಭುತ್ವ," "ಅಧಿಕಾರ" ಮತ್ತು "ದೊರೆತನ" ಇವುಗಳ ವಿವಿಧ ಬಳಕೆಗಳು ವೇದಭಾಗದ ಮೇಲೆ ಇರುವಂಥ ಪರಿಶೀಲನೆಯಲ್ಲಿ ಇವೆಯೆ? ಇದು ನಿಶ್ಚತವಾಗಿ ಕಾಣುವಂತಿದ್ದು ವೇದಭಾಗದಲ್ಲಿ ವಿಭಿನ್ನಾರ್ಥದಲ್ಲಿ ಈ ಪದಗಳು ಬಳಿಕೆಯಾಗಿದ್ದು ಒಳ್ಳೆಯ ಮತ್ತು ಕೆಟ್ಟವು, ಲೋಕದವೂ ಪರಲೋಕದವು ಎಂದು ಆಗಿವೆ. ಅಪೊಸ್ತಲನು ಮಾಡುತ್ತಿರುವ ಅಂಶವು ಅದು ಕ್ರಿಸ್ತನು ಪರಲೋಕದಲ್ಲಿಯೂ ಭೂಲೋಕದಲ್ಲಿಯೂ, ಆತ್ಮೀಕ ಮತ್ತು ಭೌತಿಕ ಎರಡೂ ಜಗತ್ತಿನಲ್ಲಿ ಎಲ್ಲಕ್ಕಿಂತಲೂ ಮತ್ತು ಪ್ರತಿಯೊಬ್ಬನಿಗಿಂತಲೂ ಮೇಲೆ ಇರುವವನಾಗಿದ್ದಾನೆ ಎಂದಾಗಿದೆ. ಇದಕ್ಕೆ ಹೊರತಾದವನು ಎಂದರೆ ದೇವರು (1 ಕೊರಿಂಥ 15:27).

**ಹೆಸರು ಗೊಂಡವರೆಲ್ಲರು** ಎಂಬ ಪದವು ಫಿಲಿಪ್ಪಿ 2:9, 10ರಲ್ಲಿ: "ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಟವಾದ ಹೆಸರನ್ನು ದಯಪಾಲಿಸಿದ್ದಾನೆ ಎಂದಿದೆ. ಆದ್ದರಿಂದ ಸ್ವರ್ಗ ಮರ್ತ್ಯಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ..." ಎಂದು ಸ್ಮರಣೀಯವಾಗಿಸುವುದಾಗಿದೆ. ಈ ಪರಿಚ್ಚೇದದಲ್ಲಿ, ಎಲ್ಲಕ್ಕಿಂತಲೂ ಮೇಲಿರುವ ಹೆಸರು "ಯೇಸು" ಆಗಿದ್ದು ಇದರ ಅರ್ಥ "ರಕ್ಷಕನಾದ ಯೆಹೋವನು" ಎಂದಾಗಿದೆ.[14] ಈ ಹೆಸರಿನ ಮಹತ್ವವು ಮತ್ತಾಯ 1:21ರಲ್ಲಿ, ದೇವದೂತನು ಯೋಸೇಫನಿಗೆ "ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕೆಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು" ಎಂದು ಹೇಳುವಲ್ಲಿ ಕಂಡುಬರುವುದಾಗಿದೆ. ಯೇಶಾಯ 9:6ರಲ್ಲಿ, ಮೆಸ್ಸೀಯನ ಪ್ರವಾದಿಯು "ವರದ ಮಗನು ನಮಗೆ ದೊರೆತನು. ಆಡಳಿತವು ಅವನ ಬಾಹುವಿನ ಮೇಲಿ ರುವದು; ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ ಸಮಾಧಾನದ ಪ್ರಭು ಎಂಬವು ಆತನ ಹೆಸರು" ಎಂದು ಹೇಳಿದ್ದಾನೆ. ಇಬ್ರಿಯ 1:4, 5 ಯೇಸುವನ್ನು ದೇವದೂತರಿಗಿಂತ ಉತ್ತಮವಾಗಿ ಚಿತ್ರಿಸಿದ್ದು: "... ಅವರಿಗಿಂತ ಶ್ರೇಷ್ಟವಾದ ಹೆಸರನ್ನು ಹೊಂದಿದ್ದಾನಲ್ಲಾ ಹೇಗೆಂದರೆ - ನನಗೆ ನೀನು ಮಗನು; ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ ಎಂತಲೂ ನಾನು ಅವನಿಗೆ ತಂದೆಯಾಗಿರುವೆನು; ಅವನು ನನಗೆ ಮಗನಾಗಿರುವನು ಎಂತಲೂ ದೇವರು ತನ್ನ ದೂತರೊಳಗೆ ಯಾವನಿಗಾದರೂ ಎಂದಾದರೂ ಹೇಳಿದ್ದುಂಟೋ?" ಎಂಬುದು ಇರುವುದಾಗಿದೆ. ಆದ್ದರಿಂದ, "ಯೇಸು" ಎಂಬ ಹೆಸರಿನ ಬಗ್ಗೆ ಅಥವಾ ಪ್ರವಾದಿಯ ವಿವರಣೆಗಳು ಅಥವಾ "ಮಗನು," ಎಂಬುದರ ಬಗ್ಗೆ ಯೋಚಿಸುವಾಗ ದೇವರಿಂದ ಆತನಿಗೆ ಕೊಡಲ್ಪಟ್ಟ ಹೆಸರು "ಕೊಡಲ್ಪಟ್ಟ ಎಲ್ಲ ಹೆಸರುಗಳಿಗಿಂತಲೂ ಮೇಲಿನದು ಆಗಿತ್ತು ..." ಕ್ರಿಸ್ತನು ಎಲ್ಲದರ ಮೇಲೆ ಪ್ರತಿಯೊಂದು ಸ್ಥಳದಲ್ಲಿ ಅಗಣ್ಯನಾಗಿದ್ದಾನೆ, ಮತ್ತು ಆತನ ಹೆಸರು ಕೊಡಲ್ಪಟ್ಟ ಎಲ್ಲ ಹೆಸರುಗಳಲ್ಲಿ ಅದ್ವಿತೀಯದ್ದು ಆಗಿದೆ.

**ಈ ಲೋಕದಲ್ಲಿ ಮಾತ್ರವಲ್ಲದೆ ಬರುವ ಲೋಕದಲ್ಲಿ ಸಹ** ಎಂಬ ಹೇಳಿಕೆಯು ಸತ್ಯವಾದದ್ದಾಗಿದೆ. "ಲೋಕ" ಎಂಬುದಕ್ಕೆ ಗ್ರೀಕ್ ಪದವು *kosmos* ಎಂದಾಗಿದ್ದು, "ಜಗತ್ತು" (KJV) ಅಥವಾ ಸೃಷ್ಟಿಸಲ್ಪಟ್ಟ ವಿಶ್ವ ಎಂಬರ್ಥವನ್ನು ಕೊಡುತ್ತದೆ, ಆದರೆ ಸಂಗತಿಗಳ ಪ್ರಸುತ್ತ ಸ್ಥಿತಿ ಹಾಗೆಯೆ ಮಿಂದಿನ ಸ್ಥಿತಿಯ ಕಾಲದ ಮತ್ತು ಅರ್ಥದ ಬಗ್ಗೆ *aiōn* ಮಾತಾನಾಡುವುದಾಗಿದೆ.[15] ನಾಮಪದವಾದ *aiōn* ಪ್ರಸ್ತುತ "ಈ ಕಾಲಕ್ಕೆ ಸಂಬಂಧಿಸಿದಂಥ" ಮತ್ತು "ಬರಲಿರುವ" ಅಂದರೆ ಭವಿಷ್ಯದಲ್ಲಿ ಯೇಸುವಿನಿಂದ ಅನಾವರಣಗೊಳ್ಳಲಿರುವ ಎರಡನೆಯ ಬರೋಣ ಇವುಗಳಿಗೆ ಬಳಸುವುದಾಗಿದೆ. ಯೇಸುವು ಪ್ರಸ್ತುತ ಕಾಲದಲ್ಲಿ

ಎಲ್ಲವುಗಳಲ್ಲಿ ಕ್ರಿಸ್ತನೆ ಅನನ್ಯನು ಆಗಿದ್ದಾನೆ. ಕ್ರೈಸ್ತರ ಬಾಧ್ಯತೆ (1:5, 18), ನಿರೀಕ್ಷೆ (1:18), ಅಂತಿಮವಾಗಿ ಬಿಡುಗಡೆ (1:14; 4:30), ಕ್ರಿಸ್ತನ ನಿತ್ಯರಾಜ್ಯದಲ್ಲಿ ಸ್ಥಳ (5:5), ಮತ್ತು ದೇವರ ಮಹಿಮೆ (3:20, 21) ಎಂಬುವುಗಳನ್ನು ಪೌಲನು ಮೇಲಿಂದ ಮೇಲೆ ಮಾತಾಡುವಾಗ ಸೂಚಿಸುವವನಾಗಿದ್ದಾನೆ.

**ವಚನ 22.** ಆತನ ಶ್ರೇಷ್ಟ ಶಕ್ತಿಯ ಮೂಲಕ, ದೇವರು ಪ್ರತಿಯೊಂದನ್ನು ಆತನ ವಶಕ್ಕೆ ಕೊಟ್ಟನು: **ಆತನು ತನ್ನ ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು.** "ಕೆಳಗೆ ಹಾಕಿದನು" ಎಂಬುದು *hupotassō*ದ ಭಾಷಾಂತರವಾಗಿದ್ದು "ಒಬ್ಬನಿಗೆ ಅಧೀನವಾಗುವದು" ಎಂಬ ಸೈನಿಕ ಪಾರಿಭಾಷಿಕ ಅರ್ಥವನ್ನು ಕೊಡುವಂಥದ್ದಾಗಿದ್ದು,[16] ದಳವು ಸೈನ್ಯಾಧಿಕಾರಿಯ ಅಡಿಯಲ್ಲಿ ಕೊಡಲ್ಪಡುವಂತಿದೆ.

> ಆದಕಾರಣ ಅದರಿಂದ [ಸಾಮಾನ್ಯ ಭೂತಕಾಲವಾದ ... of *hupotassō*] ನಿಶ್ಚಿತವಾದ ಸಮಗ್ರ ಪ್ರಭುತ್ವದ ಪರಿಣಾಮವು ಉನ್ನತೀಕರಿಸುವಿಕೆಯ ಮೇಲೆ ಆಗುವುದನ್ನು ಈ ಕಾರ್ಯವು ಸೂಚಿಸುವುದಾಗಿದೆ. ಕ್ರಿಸ್ತನನ್ನು ಎಬ್ಬಿಸಿ ದೇವರ ಬಲಗಡೆಯಲ್ಲಿರಿಸುವುದು ಎಲ್ಲ ಸಂಗತಿಗಳನ್ನು ಆತನ ಪಾದಪೀಠದಲ್ಲಿರಿಸುವ ಮತ್ತು ಆತನನ್ನು ... ಎಲ್ಲದರ ಮೇಲೆ ಸರ್ವಾಧಿಕಾರಿಯನ್ನಾಗಿಸುವುದನ್ನು ಹೊಂದಿದೆ.[17]

ಆತನ ಮರಣದಿಂದ ಪುನರುತ್ಥಾವನ್ನು ಅನುಸರಿಸಿ ಕ್ರಿಸ್ತನು "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ" ಎಂದು ಹೇಳಿದನು (ಮತ್ತಾಯ 28:18). ಆತನು ಎಲ್ಲದರ ಮೇಲೆ ಕರ್ತನು ಆಗಿದ್ದಾನೆ.

ಇದೇ ಮೊದಲ ಬಾರಿ ಪೌಲನು ಸಭೆಯನ್ನು ಪತ್ರಿಕೆಯಲ್ಲಿ ಸೂಚಿಸಿದ್ದಾನೆ. ಹೇಗೋ, ಸಮಸ್ತ ಪತ್ರಿಕೆಯು **ಸಭೆಯ** ಬಗೆಗೆ ಇರುವುದಾಗಿದೆ, ಮತ್ತು ಇದನ್ನು ಮೊದಲು ಸೂಚಿಸಿದ್ದು ದೇವರ ಉದ್ದೇಶದಲ್ಲಿ ಉನ್ನತೀಕರಿಸಿದ ಸಭೆಯ ಸ್ಥಿತಿಯನ್ನು ತೋರಿಸುವುದಾಗಿದೆ. "ಸಭೆ"ಗಾಗಿ ಗ್ರೀಕ್ ನಾಮಪದವು *ekklēsia*ವು ಸಂಯುಕ್ತ ಪದದಿಂದ ಮಾಡಲ್ಪಟ್ಟಿದ್ದು (*ek*, "ಮೀರಿದ") ಮತ್ತು (*kaleo*, "ಕರೆ") ಎಂದಾಗಿದೆ. ಇದು ಒಂದು ಗುಂಪಿನ ಜನರು ಸೇರಿಬಂದಿರುವದನ್ನು ಸೂಚಿಸುವದಾಗಿದೆ.[18] ಇದು ಹೊಸ ಒಡಂಬಡಿಕೆಯಲ್ಲಿ ಇಸ್ರಾಯೇಲ ಸಭೆಯನ್ನು (ಅಪೊಸ್ತಲರ ಕೃತ್ಯಗಳು 7:38), ಸಬೆಯಾಗಿ ಕರೆಯುವುದನ್ನು (ಅಪೊಸ್ತಲರ ಕೃತ್ಯಗಳು 19:32, 39, 41), ದೇವರ ಮಕ್ಕಳ ಒಂದು ಸ್ಥಳಿಯ ಸಭೆಯನ್ನು (ಅಪೊಸ್ತಲರ ಕೃತ್ಯಗಳು 8:1, ಉದಾಹರಣೆಗೆ), ಪ್ರಾದೇಶಿಕವಾಗಿ ಕೊಡಲ್ಪಟ್ಟ ಸಭೆಗಳು (1 ಕೊರಿಂಥ 16:1; 2 ಕೊರಿಂಥ 8:1; ಗಲಾತ್ಯ 1:2), ಮತ್ತು ವಿಶ್ವ ಸಭೆ, ಅಥವಾ ಕ್ರಿಸ್ತನಲ್ಲಿ ರಕ್ಷಿಸಲ್ಪಟ್ಟ ಎಲ್ಲರನ್ನೂ (ಮತ್ತಾಯ 16:18; ಎಫೆಸ 1:22) ಸೂಚಿಸಲು ಬಳಸಲ್ಪಟ್ಟಿದೆ. ಸಭೆಯು ದೇವಜನರನ್ನು ಕರೆದಿದ್ದು (ನೋಡಿರಿ 1 ಪೇತ್ರ 2:9, 10), ಅವರು ಸುವಾರ್ತೆಯಿಂದ ಕರೆಯಲ್ಪಟ್ಟವರು (2 ಥೆಸಲೋನಿಕ 2:14) ಮತ್ತು ವಿಧೇಯತೆಯಿಂದ ಅಂಗೀಕರಿಸಿದವರೂ ಆಗಿದ್ದಾರೆ (ಅಪೊಸ್ತಲರ ಕೃತ್ಯಗಳು 2:37-47).

ದೇವರು **ಸಭೆಗೆ ಶಿರಸ್ಸಾಗಿ ನೇಮಿಸಿದನು** ಎಂದು ಪೌಲನು ಎಫೆಸದವರಿಗೆ ಖಂಡಿತವಾಗಿ ಹೇಳುತ್ತಾನೆ. ಕ್ರಿಸ್ತನು ವಿಶ್ವದ ಪ್ರತಿಯೊಂದರ ಮೇಲೆ ಶಿರಸ್ಸಾಗಿ ಇರುವ ಹಾಗೆ ಸಭೆಗೂ ಕೂಡಾ ಶಿರಸ್ಸಾಗಿ ಇರುವ ವರವನ್ನು ದೇವರಿಂದ ಆತನು ಪಡಕೊಂಡನು. "ಶಿರಸ್ಸು" (*kephalē*) ಇದು "ಯಾವುದೇ ಅನನ್ಯವೂ, ಪ್ರಮುಖವೂ, ಪ್ರಖ್ಯಾತವೂ ಆದ ... *ಒಡೆಯ, ಕರ್ತನನ್ನು ಸೂಚಿಸಲು ಬಳಸುವಂತದ್ದಾಗಿದೆ.*"[19] ಈ ಸಂದರ್ಭದಲ್ಲಿ ಕ್ರಿಸ್ತನು ಸಭೆಯ ಶಿರಸ್ಸಾಗಿರುವದು ಸಭೆಯ ಮೇಲಿನ ಆತನ ಅಧಿಕಾರವನ್ನು ಸೂಚಿಸುವುದಾಗಿದೆ. ಕೊಲಸ್ಸೆ 2:10ರಲ್ಲಿ "ಆತನು ಎಲ್ಲಾ ದೊರೆತನಗಳಿಗೂ ಅಧಿಕಾರಿಗಳಿಗೆ ಶಿರಸ್ಸು" ಎಂಬುದನ್ನು ಈ ರೀತಿಯಲ್ಲಿ ಬಳಸಿದ್ದಾನೆ. ಸಭೆಯು ಕ್ರಿಸ್ತನೆಡೆಗೆ ಆತನ ಮಾರ್ಗದರ್ಶನದತ್ತ ಮತ್ತು ಉದ್ದೇಶ

ದತ್ತ ನೋಡುವುದಾಗಿದೆ. ಕ್ರಿಸ್ತನ ರೂಪಾಂತರದ ಸಮಯದಲ್ಲಿ ದೇವರ ಆಜ್ಞೆಯನ್ನು ನಾವು ನೆನಪಿಸಿಕೊಳ್ಳುವಾ, "ಈತನು ನನ್ನ ಪ್ರೀಯನಾಗಿರುವ ನನ್ನ ಮಗನು ಈತನನ್ನು ನಾನು ಮೆಚ್ಚಿದ್ದೇನೆ; *ಆತನ ಮಾತನ್ನು ಕೇಳಿರಿ!"* (ಮತ್ತಾಯ 17:5; ವಿವರಣೆ). ಕ್ರಿಸ್ತನ ಮಾತನ್ನು ಕೇಳುವದು ಹೊಸ ಒಡಂಬಡಿಕೆಯನ್ನು ಆತನ ಚಿತ್ತದಂತೆ ಗುರುತಿಸುವುದು (ನೋಡಿರಿ ಇಬ್ರಿಯ 9:15-17), ಹೊಸ ಒಡಂಬಡಿಕೆಯ ಮಾತುಗಳನ್ನು ಆತನ ಆಜ್ಞೆಯ ಹಾಗೆ ಲಕ್ಷಿಸುವುದು (1 ಕೊರಿಂಥ 14:37), ಮತ್ತು "ದೇವರ ಮಾತುಗಳ" ಪ್ರಕಾರ ನಾವು ಮಾತನಾಡುತ್ತಿದ್ದೇವೆಂಬುದನ್ನು ಖಚಿತಪಡಿಸಿಕೊಳ್ಳುವದು (1 ಪೇತ್ರನು 4:11). ಸಭೆಯಾದಂಥ ನಾವು ಮಾಡುವ ಎಲ್ಲದರಲ್ಲಿ, ಅದು ಆರಾಧನೆಯಾಗಿರಬಹುದು, ಸಂಯೋಜಮೆಯಾಗಿರಬಹುದು ಅಥವಾ ಸೇವೆಯಾಗಿರಬಹುದು ಎಲ್ಲದರಲ್ಲಿಯೂ ಆತನ ಅಧಿಕೃತತೆಯನ್ನು ನಾವು ಕಾಣುವವರಾಗಿರಬೇಕು.

ಕ್ರಿಸ್ತನು ಸಭೆಯ ಶಿರಸ್ಸಾಗಿರುವುದರಿಂದ, ಸಭೆಯು ವಿಶ್ವದ ಎಲ್ಲ ಸಂಗತಿಗಳಲ್ಲಿ ಇರುವವನ ಮತ್ತು "ತನ್ನೆಲ್ಲ ವೈಭಯವನ್ನು" ಆಕೆಯು ಆತನಿಗೆ ಕೊಡಲು ಬಯಸಿದವನ ಕಣ್ಣಲ್ಲಿ ಉನ್ನತೀಕರಿಸುವುದೇ ಆಗಿದೆ (5:27). ಸಭೆಯು ಕ್ರಿಸ್ತನಿಗೆ ಅಮೂಲ್ಯವಾದದ್ದಾಗಿದೆ, "ತನ್ನನ್ನು ಆಕೆಗೆ ಕೊಟ್ಟನು" (5:25) ಮತ್ತು ಆಕೆಯನ್ನು ರಕ್ಷಿಸಿದನು (5:23). ಪಾಪದಿಂದ ರಕ್ಷಿಸಲ್ಪಟ್ಟ ಮತ್ತು ದೇವರೊಂದಿಗೆ ಒಂದುಗೂಡಿದ ಪ್ರತಿಯೊಂದು ಮಾನವಜೀವಿಯು ಸಭೆಯ ಭಾಗವಾಗಿದ್ದಾರೆ (2:16). ಸಭೆಯ ಮತ್ತು ಅವಳ ಮಾನವ ರಕ್ಷಣೆಯಲ್ಲಿ ಆಕೆ ಸ್ಥಳದ ಬಗ್ಗೆ ಹೀನೈಸಿ ಮಾತನಾಡುವಂತವರು ಕ್ರಿಸ್ತನು "ಸಭೆಯನ್ನು ಪ್ರೀತಿಸುತ್ತಾನೆ" (5:25) ಮತ್ತು ತನ್ನ ಸ್ವಂತ ರಕ್ತದಿಂದ ಆಕೆಯನ್ನು ಕೊಂಡುಕೊಡಿದ್ದಾನೆ (ಅಪೊಸ್ತಲರ ಕೃತ್ಯಗಳು 20:28) ಎಂಬುದನ್ನು ನಿಶ್ಚಿತವಾಗಿ ಮರೆತವರಾಗಿರುತ್ತಾರೆ. ಸಭೆ - ಕ್ರಿಸ್ತ ಪ್ರೀತಿಯ ಅಂಶವು, ದೊಡ್ಡ ಬೆಲೆಯನ್ನೂ ತಂದದ್ದೂ ಆಗಿರುವಂತದ್ದು ಕ್ರಿಸ್ತನು ಆಕೆಯ ಶಿರಸ್ಸು ಮತ್ತು "ಕ್ರಿಸ್ತನಿಗೆ ಆಧೀನ ವಾಗಿರುವ" (ಎಫೆಸ 5:24) ಗೌರವವನ್ನು ಹೊಂದಿದೆ.

**ವಚನ 23.** ಈ ವಚನವು ಸಭೆಯನ್ನು ಕ್ರಿಸ್ತ **ದೇಹ** ಎಂಬುದಾಗಿ ವರ್ಣಿಸಿದೆ. ಗ್ರೀಕ್ ನಾಮಪದವು *sōma*, "ದೇಹ" ಎಂದು ಭಾಷಾಂತರಿಸಿದ್ದು, ಪೌಲನಿಂದ ಸಭೆಯನ್ನು ಸೂಚಿಸಲು ಸುಮಾರು ಎಂಟು ಬಾರಿ ಈ ಪತ್ರದಲ್ಲಿ ಬಳಸಲ್ಪಟ್ಟಿದೆ. ಈ ವಚನದಲ್ಲಿ, ಸಭೆಯು ಕ್ರಿಸ್ತನ ದೇಹವಾಗಿದೆ ಎಂದು ಪೌಲನು ಹೇಳಿದ್ದಾನೆ. ಕ್ರಿಸ್ತನು "ದೇಹದ" ಒಂದೆ ತಲೆಯಂತೆ ಹೆಳಲ್ಪಟ್ಟಿದ್ದಾನೆ ಮತ್ತು ಸಭೆಯು "ಒಂದೆ ದೇಹ"ದಂತೆ ಇಲ್ಲಿ ಕೊಡಲ್ಪಟ್ಟಿದೆ (ನೋಡಿರಿ 4:4).

ಈ ರೂಪಕವು ಅನೇಕ ಅರ್ಥಗಳನ್ನು ಹೊಂದಿದೆ. 1 ಕೊರಿಂಥ 12:12-26ರಲ್ಲಿ, ಸಭೆಯನ್ನು ಭೌತಿಕ ದೇಹಕ್ಕೆ ಹೋಲಿಸುವಲ್ಲಿ, ಭೌತಿಕ ದೇಹವು ಶಿರಕ್ಕೆ ಆಧೀನವಾಗಿರುವಂತೆ ಅದೆ ರೀತಿಯಲ್ಲಿ ಸಭೆಯು ಕ್ರಿಸ್ತನಿಗೆ ಆಧೀನವಾಗಿರುವದನ್ನು ಪೌಲನು ತೋರಿಸುವವನಾಗಿದ್ದಾನೆ. ಭೌತಿಕ ದೇಹವು ಸದಸ್ಯರನ್ನು ಮಾಡಿಕೊಂಡಿರುವಂತೆಯೆ, ಸಭೆಯೂ ಕೂಡ ಅನೇಕ ಸದಸ್ಯರನ್ನು ಹೊಂದಿದೆ; ಆದರೆ ಅಲ್ಲಿ ಕೇವಲ ಒಂದೆ ಶಿರಸ್ಸು ಇರುವದು ಮತ್ತು ಒಂದೆ ದೇಹವು ಇರುವದು. ಅದೇ ರೀತಿಯಲ್ಲಿ ಭೌತಿಕ ದೇಹದ ಅನೇಕ ಸದಸ್ಯರು ವಿಭಿನ್ನ ಕಾರ್ಯಗಳನ್ನು ಹೊಂದಿರುವಂತೆಯೆ, ಸಭೆಯೂ ಕೂಡಾ ದೇವರಿಂದ ವಿಭಿನ್ನ (ತಲಾಂತು) ಹೊಂದಿದ ಅನೇಕ ಸದಸ್ಯರನ್ನು ಹೊಂದಿರುವದಾಗಿದೆ. ಭೌತಿಕ ದೇಹದ ಎಲ್ಲ ಸದ್ಯಸರು ಪ್ರಮುಖವಾದವರೂ, ಅವರ ಪಾತ್ರಗಳ ಬಗ್ಗೆ ಅರಿತವರೂ ಆಗಿರುತ್ತಾರೆ; ಅದರಂತೆಯೆ ಸಭೆಯ ಎಲ್ಲ ಸದಸ್ಯರೂ ಮಹತ್ವವಾದವರೂ ಮತ್ತು ಅವಶ್ಯಕವಾದವರೂ ಆಗಿದ್ದಾರೆ. ಶಿರಸ್ಸಿನ ಮಾರ್ಗದರ್ಶನದ ಅಡಿಯಲ್ಲಿ ಪ್ರತಿಯೊಬ್ಬ ಸದಸ್ಯನ ಕಾರ್ಯ ಮಾಡು ವಾಗ ಭೌತಿಕ ದೇಹವು ಸರಿಯಾಗಿ ಕಾರ್ಯನಿರ್ವಹಿಸುವದಾಗಿದೆ, ಮತ್ತು ಕ್ರಿಸ್ತನು ಕೊಟ್ಟ ಮಾರ್ಗದರ್ಶನದ ಪ್ರಕಾರ ಪ್ರತಿಯೊಬ್ಬ ಸದ್ಯಸರು ತಮ್ಮ ತಮ್ಮ ತಲಾಂತುಗಳನ್ನು

ಬಳಸುತ್ತಾ ಸಹಕರಿಸುವಾಗ ಸಭೆಯು ಯೋಗ್ಯವಾಗಿ ಕಾರ್ಯಮಾಡುವುದಾಗಿದೆ. ಭೌತಿಕ ದೇಹವು ಶಿರಸ್ಸಿನ ಅಡಿಯಲ್ಲಿ ಸಂಯೋಜಿತವಾಗಿದೆ ಮತ್ತು ಸಭೆಯು ಯಾವುದೆ ಭಿನ್ನತೆಯಿಲ್ಲದೆ ಕ್ರಿಸ್ತನಿಗೆ ಆಧೀನವಾಗಿರುವುದಾಗಿದೆ. ಭೌತಿಕ ದೇಹದ ಸದಸ್ಯನು ನೋವನ್ನು ಅನುಭವಿಸುವವನಾದರೆ, ಸಂಪೂರ್ಣ ದೇಹವು ತೊಂದರೆಗೊಳಗಾಗುವದು; ಅದೇ ರೀತಿ ಯಲ್ಲಿ ಇದು ಸಭೆಗೂ ಅನ್ವಯಿಸುವುದಾಗಿದೆ. ಕ್ರಿಸ್ತನ ದೇಹದ ಸದಸ್ಯರು ನೋವನ್ನು ಮತ್ತು ಸಂತೋಷವನ್ನೂ ಇತರ ಸದಸ್ಯರೊಡನೆ ಹಂಚಿಕೊಳ್ಳುವವರಾಗಿದ್ದಾರೆ.

ಆ ಸಮಯದಲ್ಲಿ ಕ್ರಿಸ್ತನು ಈ ಜಗತ್ತಿನಲ್ಲಿ ಭೌತಿಕ ದೇಹವನ್ನು ಹೊಂದಿದ್ದನು. ಈಗ, ಆತನು ಭೌತಿಕ ದೇಹವನ್ನು ಹೊಂದಿಲ್ಲದಾಗ್ಯೂ, ಆತನು ಈ ಜಗತ್ತಿನಲ್ಲಿ ಆತ್ಮೀಕ ದೇಹವನ್ನು ಹೊಂದಿದ್ದಾನೆ. ಕ್ರಿಸ್ತ ದೇಹವಾದ ಸಭೆಯು, ಕೇವಲ ಸುವ್ಯವಸ್ಥಿತವಾದ ಕ್ರಿಸ್ತನ ನಿಯಂತ್ರಣದಲ್ಲಿರುವದಕ್ಕಿಂತ ಹೆಚ್ಚಾದದ್ದೂ ಆಗಿದೆ. ಈ ದೇಹವು ಸಜ್ಜೀವ ರಚನೆಯಾಗಿದ್ದು ಜೀವಿಸುವ ಶಿರಸ್ಸಿನಿಂದ ಜೀವಿತವನ್ನು ಪಡೆಯುವುದಾಗಿದ್ದು, ಆತನ ಶಕ್ತಿಯಿಂದ ಇರುವಂಥದ್ದೂ ಆತನ ಕಾರ್ಯಮಾಡುವದರ ಮೂಲಕ ಸಾಧನವಾಗಿರುವಂತದ್ದೂ.

ಸಭೆಯು "ಆತನ ಸಂಬಂಧದಲ್ಲಿ ವ್ಯಾಪ್ತಿಸುವಾತನಿಂದ ಅದು ಪರಿಪೂರ್ಣತಯುಳ್ಳದ್ದಾಗಿದೆ" ಎಂದು ಹೇಳಲ್ಪಟ್ಟಿದೆ. ಸಭೆಯು ಕ್ರಿಸ್ತನ ದೇಹವಾದಂತೆಯೆ, ಅದು ಕ್ರಿಸ್ತನಿಂದ ಪರಿಪೂರ್ಣತೆಯುಳ್ಳದ್ದಾಗಿದೆ. **ಆತನ ಪರಿಪೂರ್ಣತೆ** ಎಂಬುದರ ಅರ್ಥವನ್ನು ಪ್ರಚಾರಕರು ಒಪ್ಪುವುದಿಲ್ಲ. "ಪರಿಪೂರ್ಣತೆ" ಎಂಬುದರಿಂದ ಇರುವಂಥ ಗ್ರೀಕ್ ಪದವು *plērōma*, ಎಂದು ಭಾಷಾಂತರವಾಗಿದ್ದು ಇದರ ಅರ್ಥವು "ತುಂಬಲ್ಪಟ್ಟಂಥದ್ದು ಅಥವಾ ತುಂಬಿರುವಂಥದ್ದು"[20] ಎಂದಾಗಿದೆ; ಆದರೆ ಈ ಸಂದರ್ಭದಲ್ಲಿ ಯಾವ ಪದವು ಪ್ರತಿನಿಧಿಸುವದು ಎಂಬುದನ್ನು ಕಂಡುಹಿಡಿಯುವದು ಕಠಿಣವಾದದ್ದಾಗಿದೆ. ಕ್ರಿಸ್ತನು ಸಭೆಯನ್ನು ಪರಿಪೂರ್ಣಮಾಡುವವನು ಎಂಬ ವಿಚಾರದಲ್ಲಿ ಆತನು ಖಚಿತವಾಗಿ ಮಾಡುವನು; ಆದರೆ "ದೇಹ" ಮತ್ತು "ಪರಿಪೂರ್ಣತೆ" ಎರಡೂ ಈ ವಚನದಲ್ಲಿ ಸಭೆಯನ್ನು ಸೂಚಿಸುವವು ಆಗಿವೆ ಎಂದು ಕೆಲ ಪ್ರವಾಚಕರು ಹೇಳುತ್ತಾರೆ.

ನಂತರ ಯಾವ ಅರ್ಥದಲ್ಲಿ ಸಭೆಯು ಕ್ರಿಸ್ತನ "ಪರಿಪೂರ್ಣತೆಯಲ್ಲಿ" ಇದೆ? ಈ ಪದವನ್ನು ಪೌಲನು ಗಲಾತ್ಯ 4:4ರಲ್ಲಿ ಮತ್ತು ಕೊಲಸ್ಸೆ 1:19; 2:9ರಲ್ಲಿ, ಅದಂರತೆಯೆ ಎಫೆಸ 1:10, 23; 3:19; 4:13ರಲ್ಲಿ ಬಳಸಿದ್ದಾನೆ. ಗಲಾತ್ಯ 4:4ರಲ್ಲಿ "ಪರಿಪೂರ್ಣತೆ" ಎಂಬುದು "ಕಾಲವು ಪರುಪೂರ್ಣವಾದಾಗ" ಎಂಬ ಅರ್ಥದಲ್ಲಿ ಕಂಡುಬರುತ್ತದೆ. ಇದೇ ರೀತಿಯ ಅರ್ಥವು "ಕಾಲವು ಪರಿಪೂರ್ಣವಾದಾಗ" ಎಫೆಸ 1:10ರಲ್ಲಿ ಪೌಲನು ಸೂಚಿಸುವಲ್ಲಿ ಕಂಡುಬಂದಿದೆ. 3:19ರಲ್ಲಿ, ಕ್ರೈಸ್ತರು "ದೇವರ ಸಂಪೂರ್ಣತೆ"ಯಿಂದ ಅಥವಾ ಎಲ್ಲವೂ ದೇವರು ಇರುವುದರಿಂದ ತುಂಬಿರುತ್ತಾರೆ ಎಂದು ಪೌಲನು ಮಾತನಾಡುತ್ತಾನೆ. "ಕ್ರಿಸ್ತನ ಪರಿಪೂರ್ಣತೆಯಲ್ಲಿ" ಸಭೆಯು ಪ್ರೌಢತೆಯನ್ನು ಅನುಭವಿಸುವುದಾಗಿದೆ ಎಂದು ಎಫೆಸ 4:13 ಹೇಳುತ್ತದೆ. ಕೊಲಸ್ಸೆ 1:19ರಲ್ಲಿ ಪರಿಪೂರ್ಣತೆಯ ದಿವ್ಯತೆಯು ಕ್ರಿಸ್ತನಲ್ಲಿ ಇರುವುದನ್ನು ನಾವು ನೋಡುತ್ತೇವೆ. ಈ ಪ್ರತಿಯೊಂದೂ ಸಂದರ್ಭಗಳಲ್ಲಿ, "ಪರಿಪೂರ್ಣತೆಯೆ" ಅರ್ಥವು ಗಾಸ್ಲಿನಲ್ಲಿ ನೀರು ತುಂಬಿದಂತೆ, ಸಂಪೂರ್ಣತೆಯು ತುಂಬಿ ಇರುವಂತೆ, ಅಥವಾ ಪರಿಪೂರ್ಣವಾಗಿರುವುದು ಯಾವುದೋ ಒಂದಕ್ಕೆ ಅಥವಾ ಯಾರಿಗಾದರೂ ಶ್ಲಾಘನೆ ಮಾಡಿದಂತೆ ಇರುವುದಾಗಿದೆ.

ಆದ್ದರಿಂದ ನೀರಿನ ಗ್ಲಾಸು ತುಂಬಿರುವಂತೆ ಸಭೆಯು ಕ್ರಿಸ್ತನ ಪರಿಪೂರ್ಣತೆ ಆಗಿದೆ ಎಂದು ನಾವು ಪರಿಗಣಿಸಬಹುದು. ಸಭೆಯು ರಕ್ಷಿಸಲ್ಪಟ್ಟಿದೆ. ಕ್ರಿಸ್ತನು **ಎಲ್ಲದರಲ್ಲಿ ತುಂಬಿರಲಿ** ಎಂದು ಹೇಳುವ ಮೂಲಕ ತನ್ನ ಪ್ರಾರ್ಥನೆಯ ಈ ಭಾಗವನ್ನು ಸಂಪೂರ್ಣಗೊಳಿಸುತ್ತಾನೆ. ಕ್ರಿಸ್ತನು ಸೃಷ್ಟಿಯನ್ನು ತುಂಬಲಿ ಮತ್ತು ಸಭೆಯನ್ನು ತುಂಬಲಿ, ಕರ್ತನ ಸಾರ್ವಭೌಮತೆಯಂತೆ ಕ್ರಿಸ್ತನು ದೇವರನ್ನು ಶಕ್ತಿಯನ್ನು ಪಡಕೊಂಡು ಎಲ್ಲವೂ ಆತನೇ ಆಗಿದ್ದಾನೆ. "ಆತನ

ಕರೆಯುವಿಕೆಯ ನಿರೀಕ್ಷೆಯನ್ನು," "ಆತನ ಬಾಧ್ಯತೆಯ ಮಹತ್ತನ್ನು" ಮತ್ತು "ಆತನ ಮಹಿಮೆಯನ್ನು ಪ್ರಖ್ಯಾತಿಪಡಿಸುವುದನ್ನು" ಹೆಚ್ಚು ಸಂಪೂರ್ಣವಾಗಿ ಎಫೆಸದವರು ತಿಳಿಯಬೇಕೆಂದು ಪೌಲನ ಪ್ರಾರ್ಥನೆ ಆಗಿತ್ತು. ಆತನು ಮರಣದಿಂದ ಎದ್ದು, ಆತನು ದೇವರ ಬಲಗಡೆಯಲ್ಲಿ ಉನ್ನತೀಕರಿಸಲ್ಪಟ್ಟು ಮತ್ತು ಸಭೆಯ ಮೇಲೆ ಶಿರಸ್ಸಾಗಿ ಮಾಡಿದಾಗ ದೇವರ ದೊಡ್ಡ ಶಕ್ತಿಯು ಕ್ರಿಸ್ತನಲ್ಲಿ ತರುವುದಾಗಿದೆ.

## ಅನ್ವಯ

**ನಮ್ಮ ಸ್ಥಾನವನ್ನು ಅರಿತುಕೊಳ್ಳುವುದು (1:15-23)**

ನಮ್ಮ ಮಗನು soccer ಆಡುವಾಗ, ತರಬೇತುದಾರನ ದೊಡ್ಡ ಕೆಲಸವೆಂದರೆ ಪ್ರತಿಯೊಬ್ಬ ಆಟಗಾರನಿಗೂ ತಂಡದಲ್ಲಿ ಇರಿಸುವದು ಮತ್ತು ತನ್ನ ಯೋಗ್ಯವಾದ ಸ್ಥಳದಲ್ಲಿ ಆಡಿಸುವುದೇ ಆಗಿತ್ತು. ಆಟದ ಆರಂಭದಲ್ಲಿ, ಗಲಿಬಿಲಿಗೊಂಡ ಚಿಕ್ಕ ಹುಡಗನಿಂದ ದಿಗ್ಭ್ರಮೆಯ ನೋಟವನ್ನು ಮಾತ್ರ ಪಡೆಯಲು ಒಬ್ಬ ಆಟಗಾರನಿಗೆ ಆತನು ಪದೇ ಪದೇ ಸ್ಥಾನದಲ್ಲಿರಲು ಹೇಳುತ್ತಿದ್ದನು. ಒಬ್ಬ ಆಟಗಾರನು ತನ್ನ ಸ್ಥಾನವನ್ನು ತಿಳಿದುಕೊಂಡು ಆಟವನ್ನು ಎಷ್ಟು ಸೊಗಸಾಗಿ ಆಡಬಹುದು ಎಂದು ಅರಿತಿರಬೇಕು.

ಇದೇ ರೀತಿಯದ್ದು ಆತ್ಮೀಕತೆಯ ಬಗ್ಗೆ ಮಾತನಾಡುವಗಲೂ ನಿಜವಾದದ್ದು ಆಗಿದೆ: ದೇವರ ಮುಂದೆ ನಮ್ಮ ಸ್ಥಾನವನ್ನು ಅರಿತುಕೊಳ್ಳುವದು ನಮಗೆ ಅವಶ್ಯವಿದೆ. ನಮ್ಮ ದೈನಿಕ ಅಭ್ಯಾಸವು ಕ್ರಿಸ್ತನಲ್ಲಿಯ ನಮ್ಮ ಸ್ಥಾನದ ನಮ್ಮ ತಿಳುವಳಿಕೆಗೆ ಎಂದಿಗೂ ಮಿಗಿಲಾಗಿರುವುದಿಲ್ಲ!

ಎಫೆಸ 1-3ರಲ್ಲಿ, ಪೌಲನು ಕ್ರೈಸ್ತರ ಸ್ಥಾನವನ್ನು ವಿವರಿಸಿದ್ದಾನೆ. ಅಧ್ಯಾಯ 4ರಿಂದ 6ರಲ್ಲಿ, ನಮ್ಮ ಅಭ್ಯಾಸದ ಬಗೆಗೆ ಆತನು ಹೇಳಿದ್ದಾನೆ - ಅದು ಸ್ಥಾನದಲ್ಲಿ ನಾವು ದಿನಾಲು ಹೇಗೆ ಕಾರ್ಯಮಾಡುತ್ತೇವೆ ಎಂಬುದೇ ಆಗಿದೆ. ನಾವು ಆರಿಸಲ್ಪಟ್ಟವರು, ವಿಮೋಚಿಸಲ್ಪಟ್ಟವರು, ಮತ್ತು ಕ್ರಿಸ್ತನಲ್ಲಿ ಭಾಧ್ಯತೆಯ ಖಚಿತತೆ ಇದ್ದವರೂ ಆಗಿದ್ದೇವೆ ಎಂದು ಪೌಲನು ಹೇಳಿದನು (1:1-14). ಮುಂದೆ, ಎಫೆಸದವರಿಗಾಗಿ ಆತನ ಪ್ರಾರ್ಥನೆಯ ಬಗ್ಗೆ ನಾವು ಕಲಿಯೋಣ.

ಈ ಸಹೋದರರು ಇದನ್ನು ಮಾಡಲಿ ಅಥವಾ ಅದನ್ನು ಮಾಡಲಿ ಎಂದು ಪೌಲನು ಪ್ರಾರ್ಥಿಸಲಿಲ್ಲ. ಬದಲಾಗಿ, ಅವರ ತಿಳುವಳಿಕೆಗಾಗಿ ಆತನು ಪ್ರಾರ್ಥಿಸಿದನು (1:17).

ಪೌಲನು ಕೇವಲ ಕ್ರೈಸ್ತರ ಮನಗಳು ಶಿಕ್ಷಿತವಾಗಲಿ ಎಂದು ಮಾತ್ರ ಪ್ರಾರ್ಥಿಸಲಿಲ್ಲ, "ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ..." ಎಂದು ಹೇಳಿದನು (1:18). ಬೈಬಲ್ಲಿನಲ್ಲಿ, "ಹೃದಯ" ಇದರ ಅರ್ಥವು ಮನಸ್ಸಿಗಿಂತಲೂ ಹೆಚ್ಚಿನದಾಗಿದೆ. ಇದರ ಅರ್ಥವು, ಆಂತರ್ಯದ ಮನುಷ್ಯನು, ಆಳವಾದ ರೀತಿಯಲ್ಲಿ ಇರುವವನಾಗಿದ್ದಾನೆ. ಪ್ರಜಾಪೂರಕವಾಗಿ, ಸೂಕ್ಷ್ಮವಾಗಿ, ಜವಾಬ್ದಾರಿಯುತವಾಗಿ ಮತ್ತು ಜ್ಞಾನಯುತವಾಗಿರುವದು ಈ ಪದದಲ್ಲಿ ಒಳಗೊಂಡಿದೆ. ಪೌಲನು ಹೆಚ್ಚು ಕಡಿಮೆ ಕೆಲ ವಾಸ್ತವಗಳ ಜ್ಞಾನಯುತವಾಗಿ ಗ್ರಹಿಕೆಯಂತೆ ಪ್ರಾರ್ಥಿಸಿದನು. ನಮ್ಮ ಆತ್ಮಗಳ ಆಳವಾದ ಗುಪ್ತಸ್ಥಳವು ಯೇಸುವಿನ ಶ್ರೇಷ್ಠತೆ ಮತ್ತು ಆತನು ನಮಗಾಗಿ ಇರಿಸಿದಂತಹ ಸ್ಥಾನ ಇವನ್ನು ನಾವು ತಿಳಿಯಬೇಕೆಂದು ಆತನು ಬಯಸಿದನು.

1:18-21ರಲ್ಲಿ ಪೌಲನ ಪ್ರಾರ್ಥನೆಯ ಮೂರು ಅಂಶಗಳು ಯೇಸುವಿನ ಬಗ್ಗೆ ನಮ್ಮ ಅರಿತುಕೊಳ್ಳುವಿಕೆಯನ್ನು ಹೆಚ್ಚಿಸುವವು ಆಗಿವೆ. ಅವುಗಳನ್ನು ಗ್ರಹಿಸುವದು ಜೀವಿತ ಸಮಯದ ಸಾಧನೆಯು ಆಗಿದೆ. ಈ ಸತ್ಯಗಳನ್ನು ನಾವು ಹೆಚ್ಚು ಆಳವಾಗಿ ಅರಿತುಕೊಂಡಾಗ, ದೇವರ ಮುಂದಿನ ನಮ್ಮ ಸ್ಥಾನದ ಬಗ್ಗೆ ಆತ್ಮವಿಶ್ವಾವನ್ನು ತಾಳುವವರಾಗಿದ್ದೇವೆ. ಹೆಚ್ಚು ಸಂಪೂರ್ಣವಾಗಿ ನಮ್ಮ ಸ್ಥಾವನ್ನು ನಾವು ಅರಿತುಕೊಂಡಾಗ, ಹೆಚ್ಚು ಅಗಾಧತೆಯಿಂದ ಕ್ರೈಸ್ತರಾದಂತ ನಮ್ಮ ಅಭ್ಯಾಸದತ್ತ ಇದು ಪರಿಣಾಮವನ್ನು ಉಂಟುಮಾಡುವದ್ದಾಗಿದೆ.

*ನಾವು ಹೊಂದಿದ ಆಶೋತ್ತರಗಳು.* ಮೊದಲ ಸತ್ಯವು ಯೇಸುವಿನಲ್ಲಿಯ ನಾವು

ಹೊಂದಿದ ಆಶೋತ್ತರವನ್ನು ಕ್ರೈಸ್ತರು ಹೆಚ್ಚು ಸಂಪೂರ್ಣವಾಗಿ ಅರಿತುಕೊಳ್ಳಬೇಕು ಎಂದು ಪೌಲನು ಬಯಸುತ್ತಾನೆ: "ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ತರೆಯಿಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದ್ದೆಂಬುದನ್ನು ದೇವಜನರೆಂಬ ಆತನ ಸ್ವಾಸ್ಥದ ಮಹಿಮಾತಿಶಯವು ಎಂಥದ್ದೆಂಬುದನ್ನು ನಂಬುವವರಾದ ನಮ್ಮಲ್ಲಿ ..." (1:18).

ಪೌಲನು "ಕರೆಯಿಸಿಕೊಂಡವರು ನಿರೀಕ್ಷಿಸುವ" ಈ ಚಿಕ್ಕ ಪದಗಳಲ್ಲಿ ನಮ್ಮನ್ನು ನಿತ್ಯತ್ವದಿಂದ ನಡಿಸುವವನಾಗಿದ್ದಾನೆ. ದೇವರು ನಮ್ಮನ್ನು ಕ್ರಿಸ್ತನಲ್ಲಿಯು ರಕ್ಷಣೆಗಾಗಿ ನಾವು ಆಯ್ಕೆಯಾದಾಗ ನಾವು ನಿತ್ಯತ್ವದ ಭೂತಕಾಲದಿಂದ ಕರೆಯಲ್ಪಟ್ಟವರಾಗಿದ್ದೆವು. ನಿರೀಕ್ಷೆಯು ಬರಬೇಕಾದಗಿರುವ ನಿತ್ಯತ್ವದಲ್ಲಿ ನಮ್ಮ ಕರೆಯುವಿಕೆಯ ಸಂಪೂರ್ಣ ಅರಿತುಕೊಳ್ಳುವಿಕೆಗೆ ಸಂಬಂಧಿಸಿದೆ. ನಾವು ಹೊಂದಿರುವ ಈ ನಿರೀಕ್ಷೆಯು ಕೊಡುಗೆಗಾಗಿ ಹಾರೈಸುವ ಮಗುವಿನ ಹಾಗೆ ಇರುವುದಿಲ್ಲ. ಇಲ್ಲಿ, ವಿಶ್ವಾಸಿಗಳಾಗಿದ್ದಾಗಿದ್ದು, ಗಟ್ಟಿಯಾದ ಆಶೋತ್ತರ, ನಮ್ಮ ಭವಿಷ್ಯದ ಬಗ್ಗೆ ನಿಶ್ಚಿತವಾದ ಖಚಿತತೆ ಆಗಿದೆ ಯಾಕೆಂದರೆ ದೇವರು ನಮಗಾಗಿ ಆನು ಮಾಡಿದ್ದಾನೊ ಅದರಲ್ಲಿ ನಾವು ಸಂಪೂರ್ಣವಾಗಿ ನಂಬಿಕೆ ಇಡುವವರು ಆಗಿದ್ದೇವೆ. ಪೌಲನು ಈ ಧೃಢವಾದ ಹಾರೈಕೆಯು ನಮ್ಮ ಅಂತರ್ಯದಲ್ಲಿ ಹರಡಿಕೊಳ್ಳಲಿ ಎಂಬುದರ ಬಗ್ಗೆ ಪ್ರಾರ್ಥಿಸಿದನು.

ನಮ್ಮ ಧೃಢತೆಯ ವಾಸ್ತವವು ನಾವು ಮಾಡಿದ್ದರಲ್ಲಿ ಬೇರೂರಿರುವುದಿಲ್ಲ. ನಾವು ಏನು ಮಾಡಬೇಕು ಎಂಬ ಒಂದು ಮಾತಿಗಾಗಿ ನಾವು ಇನ್ನೂ ಈ ಪತ್ರಿಕೆಯನ್ನು ಓದುತ್ತಿಲ್ಲ. ನಮ್ಮನ್ನು ಆಯ್ದುಕೊಳ್ಳುವಲ್ಲಿ, ನಮ್ಮನ್ನು ವಿಮೋಚಿಸುವಲ್ಲಿ, ಮತ್ತು ನಮ್ಮನ್ನು ಕ್ಷಮಿಸುವಲ್ಲಿ ದೇವರು ಮಾಡಿದ್ದನ್ನು ಮಾತ್ರ ಪೌಲನು ಕೊಂಡಾಡಿದ್ದಾನೆ. ನಮಗೆ ಬಾಧ್ಯತೆಯನ್ನು ಕೊಡುವ ವಾಗ್ದಾನಕ್ಕೆ ದೇವರು ನಮಗೆ ಭರವಸೆಕೊಡುವವನಾಗಿದ್ದಾನೆ. ಪೌಲನು ಫಿಲಿಪ್ಪಿಯವರಿಗೆ, "ಈ ಒಳ್ಳೆಯ ಕೆಲಸವನ್ನು ನಿಮ್ಮಲ್ಲಿ ಪ್ರಾರಂಭಿಸಿದಾತನು ಅದನ್ನು ನಡೆಸಿಕೊಂಡು ಯೇಸುಕ್ರಿಸ್ತನು ಬರುವ ದಿನದೊಳಗೆ ಸಿದ್ಧಿಗೆ ತರುವನೆಂದು ..." ಬರೆಯುತ್ತಾನೆ (ಫಿಲಿಪ್ಪಿ 1:6). ತನ್ನ ಅದ್ಭುತವಾದ ಕೃಪೆಯ ಮೂಲಕ ದೇವರು ಸಂಪೂರ್ಣಗೊಳಿದಂಥಹದರಲ್ಲಿ ನಮ್ಮ ನಿರೀಕ್ಷೆಯು ಪ್ರತ್ಯೇಕವಾಗಿ ನೆಲಸುವುದಾಗಿದೆ.

ನಮ್ಮ ಆತ್ಮ ವಿಶ್ವಾಸವು ಇನ್ನೂ ಕಟ್ಟಲ್ಪಡದೆ ಇದ್ದಾಗ, ಪೌಲನು "ಆತನ ಬಾಧ್ಯತೆಯ ಮಹಿಮೆಯನ್ನು" ಸೂಚಿಸುತ್ತಾ ಮಾತನಾಡುವವನಾಗಿದ್ದಾನೆ ಅದು ನಮ್ಮದು ಆಗಿದೆ. ನಾವು ದೇವರ ಮಹತ್ತಾದ ಯೋಜನೆ ಆಗಿದ್ದೇವೆ. ಆತನ ಮಗನಾದ ಯೇಸುವಿನ ಸಹ ಬಾಧ್ಯಸ್ಥರು ಆಗಿದ್ದೇವೆ (ರೋಮಾಪುರ 8:17) ಪ್ರತಿಯೊಂದು ನಮ್ಮದೇ ಆಗಿದೆ!

ಪೌಲನು ನಂತರ, "ಆತನ ಬಾಧ್ಯಸ್ಥಿಕೆಯನ್ನು *ಅರಿಯಬೇಕು* ... ಆತನ *ಮಹಿಮಾಯತವಾದ* ಬಾಧ್ಯಸ್ಥಿಕೆಯನ್ನು ಅರಿಯಬೇಕಾಗಿದೆ ... ಆತನ ಬಾಧ್ಯಸ್ಥಿಕೆಯ *ಸ್ವಾಸ್ಥದ ಮಹಿಮೆಯನ್ನು* ನೀವು ಅರಿಯಬೇಕು ನಾನು ಬಯಸುವವನಾಗಿದ್ದೇನೆ" ಎಂದು ಹೇಳುತ್ತಾನೆ. ತನ್ನ ಜನರಿಗಾಗಿ ದೇವರ ಆಶೀರ್ವಾದದ ಮಿಗಿಲತೆಯನ್ನು ಪೌಲನು ಸಾಕಷ್ಟು ಒತ್ತಿಹೇಳಿಲ್ಲ. ತಿರುಗಿ, ದೇವರ ಆತ್ಮೀಕ ಸ್ವಾಸ್ಥತೆಯ ಶ್ರೇಷ್ಟತೆಯನ್ನು ಆತನು ನೆನಪಿಸುವುದನ್ನು ಆತನು ಒಳಗೊಳ್ಳಿಸಿದ್ದಾನೆ. ಈ ಪದಗಳ್ಟವನ್ನು ಗಮನಿಸಿರಿ: "... ಆತನ ಮಹಿಮೆಯ ಸ್ವಾಸ್ಥತೆ" (1:7); "ಆದರೆ ಕರುಣಾನಿಧಿಯಾಗಿರುವ ದೇವರು" (2:4); "... ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯ" (3:8); "ದೇವರಾತ್ಮದ ಮೂಲಕ ಅಂತರ್ಯದಲ್ಲಿ ವಿಶೇಷ ಬಲ ಹೊಂದಿದವರಾಗುವ ಹಾಗೆಯೇ ..." (3:16).

ತನ್ನ ಸ್ಥಾನವನ್ನು ಮತ್ತು ಆತ್ಮೀಕ ಸಂಪತ್ತನ್ನು ಗ್ರಹಿಸಿದ ವಿಶ್ವಾಸಿಯ ಜೀವಿತದಲ್ಲಿ ಭಯಕ್ಕೆ ಯಾವ ಕೋನೆಯು ಇಲ್ಲ, ಸಂಶಯಕ್ಕೆ ಯಾವ ಕೋನೆಯೂ ಇಲ್ಲ, ಕಾತುರಕ್ಕೆ ಯಾವ ಕೋನೆಯೂ ಇಲ್ಲ. ದೇವರು ಆತನ ಎಲ್ಲ ಅವಶ್ಯಕತೆಗಳನ್ನು ಸಂಪೂರ್ಣಗೊಳಿಸಲು ಸಮರ್ಥನಾಗಿರುವುದರಿಂದ ಆತನ ಭವಿಷ್ಯವು ಸಂಶಯದಲ್ಲಿ ಇರುವುದಿಲ್ಲ. ವಿಶ್ವಾಸಿಯು ಈ ದಿನದ ಆತ್ಮೀಕ ವಿಜಯದಲ್ಲಿ ನಡೆಯುವವನೂ, ಭವಿಷ್ಯವು ಆತನಿಗಾಗಿ ಏನನ್ನು

ಹೊಂದಿಕೊಂಡಿದೆ ಎಂದು ತಿಳಿದವನೂ ಆಗಿರುತ್ತಾನೆ.

ದಿನಪತ್ರಿಕೆಯ ಪ್ರಕಾಶಕ ದಿವಂಗತ William Randolph Hearst ಜಗತ್ತಿನೆಲ್ಲಡೆಯೊಂದ ಭವಿಷ್ಯದ ಸಂಗ್ರಹದ ಕಲೆಯ ಕಣಜಗಳನ್ನು ತೊಡಗಿಸಿದನು. ಒಂದು ದಿನ ಶ್ರೀ Hearstನು ತನಗೆ ಸ್ವತಃ ಇಚ್ಚಿತವಾದ ಅಮೂಲ್ಯವಾದ ಕತೆಯೊಂದನ್ನು ಕೇಳಿದನು, ಅದನ್ನು ಹುಡುಕಲು ತನ್ನ ಏಜಂಟನನ್ನು ವಿದೇಶಕ್ಕೆ ಕಳುಹಿಸಿದನು. ಕೆಲ ವರ್ಷಗಳ ಹುಡುಕಿವಿಕೆಯ ನಂತರ ಆತ ಏಜಂಟನು ಆ ಸಂಪತ್ತನ್ನು ತಾನು ಕಂಡುಕೊಂಡಿದ್ದೇವೆ. ವರದಿಮಾಡಿದನು. ಅದು Mr. Hearstನ ಸ್ವತದ ಗೊದಾಮು ಆಗಿತ್ತು! Hearstನು ಕಾತುರದಿಂದ ಹುಡುಕಿದ ಸಂಪತ್ತು ಈಗಾಗಲೇ ಆತನು ಹೊಂದಿದ್ದೇ ಆಗಿತ್ತು ಆದರೆ ಅದನ್ನು ಆನಂದಿಸುವಲ್ಲಿ ಆತನು ವಿಫಲನಾಗಿದ್ದನು.

ನಾವು ಕೇವಲ ಆತನಿದ್ದ ರೀತಿಯಲ್ಲಿ ಇರಬಾರದು. ನಾವು ಈಗಾಗಲೇ ಹೊಂದಿದ್ದನ್ನು ನಮಗೆ ಕೊಡುವಂತೆ ದೇವರಲ್ಲಿ ಬೇಡುವ ಮತ್ತು ಪ್ರತಿಪಾದಿಸುವ ಮೂಲಕ ನಾವು ಸಾಗಬೇಕು. ನಾವು ನಿತ್ಯಜೀವವನ್ನು ಹೊಂದಿದ್ದೇವೆ, ದೇವರ ಸ್ವಾಸ್ಥತೆಯನ್ನು ನಾವು ಹೊಂದಿಕೊಂಡಿದ್ದೇವೆ. ಕ್ರಿಸ್ತನಲ್ಲಿ ಎಲ್ಲವೂ ನಮ್ಮದೆ ಎಂಬ ಸಂಪೂರ್ಣ ನಿರೀಕ್ಷೆಯಿಂದ ಪ್ರತಿದಿನ ನಾವು ಜೀವಿಸುವವರಾಗಿರಬೇಕೆಂದು ಪೌಲನು ಪ್ರಾರ್ಥಿಸುವವನಾಗಿದ್ದಾನೆ.

*ನಾವು ಹೊಂದಿರುವುದನ್ನು ಬಲಪಡಿಸುವದು.* “ನಿಮ್ಮ ಮನೋನೇತ್ರಗಳನ್ನು ಬೆಳಗಿಸಿ ಆತನಿಂದ ಕರೆಯಿಸಿಕೊಂಡವರು ನಿರೀಕ್ಷಿಸುವ ಪದವಿ ಎಂಥದ್ದೆಂದೂ ... ಆತನು ಸಾಧಿಸುವ ಪರಾಕ್ರಮವು ಎಷ್ಟು ಅತಿಶಯವಾದದ್ದೆಂದು ನೀವು ತಿಳುಕೊಳ್ಳುವಂತೆ ಅನುಗ್ರಹಿಸಲಿ” (1:18, 19) ಎಂದು ಪೌಲನು ಪ್ರಾರ್ಥಿಸಿದನು.

ದೇವರ ಶಕ್ತಿಯು ಭೂಮಿಯ ಹೊರಗೆ ಕಾರ್ಯಮಾಡುತ್ತಿಲ್ಲ. ಇಲ್ಲ, ನಮ್ಮಲ್ಲಿ ದೇವರ ಶಕ್ತಿಯು ಕಾರ್ಯಮಾಡುವುದನ್ನು ಕ್ರೈಸ್ತರು ವೈಯಕ್ತಿಕವಾಗಿ ಅನುಭವಿಸಲಿ ಎಂದು ಪೌಲನು ಪ್ರಾರ್ಥಿಸಿದನು.

ನಮ್ಮ ಜೀವಿತದಲ್ಲಿ ಸ್ವತಂತ್ರ್ಯವನ್ನು ಕೊಡಲು ದೇವರು ಎಂಥ ಶಕ್ತಿಯನ್ನು ಬಯಸುತ್ತಾನೆ ಎಂಬುದನ್ನು ಗಮನಿಸಿರಿ: “ಆತನ ಬಲಾತಿಶಯವು ಎಷ್ಟು ಮಹತ್ತಾದದ್ದೆಂಬುದು ಕ್ರಿಸ್ತನಲ್ಲಿ ತೋರಿಬಂದಿದೆ ... ಹೇಗೆಂದರೆ ಆತನು ಸತ್ತಿದ ಕ್ರಿಸ್ತನನ್ನು ಬದುಕಿಸಿ ...” (1:19, 20). ಕ್ರೈಸ್ತರಾದ ನಮಗೆ ಲಭ್ಯವಿರುವ ಶಕ್ತಿಯನ್ನು ವರ್ಣಿಸಲು ಪೌಲನು ಎಲ್ಲ ಪದಗಳನ್ನು ಒಟ್ಟಿಗೆ ತರುವವನಾಗಿದ್ದಾನೆ. ಆತನು “ಡೈನಮೊ” ಮತ್ತು “ಡೈನಮೇಟ್” ನಮ್ಮ ಮೂಲ ಪದಕೋಸ್ಕರವಾಗಿರುವ *dunamis*, ಬಗ್ಗೆ ಮೊದಲು ಮಾತನಾಡಿದನು. ಇದು ನಂಬಿಕೆಗೂ ಮೀರಿದ ಶಕ್ತಿಯನ್ನು ಸೂಚಿಸುವುದಾಗಿದೆ!

ಈ ಶಕ್ತಿಯು ದೇವರ “ಕಾರ್ಯದೊಡನೆ” - ಸಹಯೋಗಿಯಾಗಿದೆ ಎಂದು ನಂತರದಲ್ಲಿ ಪೌಲನು ಹೇಳುತ್ತಾನೆ ಮತ್ತು ಇದು ನಮ್ಮ ಪದವಾದ “ಚೈತನ್ಯ” ಎಂಬುದನ್ನು ಕೊಡುವುದಾಗಿದ್ದು ಇದು ಗ್ರೀಕ್ ಪದವಾದ *energeia* ದಿಂದ ಬಂದದ್ದಾಗಿದೆ. ನಾವು ದಿವ್ಯ ಶಕ್ತಿಯಿಂದ ಚೈತನ್ಯಯುತರಾಗಬೇಕು. ನಮ್ಮ ಕ್ರಿಸ್ತೀಯ ಜೀವಿತದಲ್ಲಿ ವಿಜಯಕೋಸ್ಕರ ನಾವು ಆತ್ಮೀಕವಾಗಿ ಪ್ರಭಾವಿತರಾಗಿರಬೇಕು!

ನಂತರ, ಕ್ರೈಸ್ತರ ಬಲದೊಡನೆ - ಮತ್ತು ಕೇವಲ ಬಲವಲ್ಲ, ಆದರೆ ಅದ್ಭುತವಾದ ಬಲದೊಡನೆ *ಚೈತನ್ಯ*ಯುತರಾಗಬೇಕು ಎಂದು ಪೌಲನು ಹೇಳುತ್ತಾನೆ. ನಾವು ದೇವರ ಶಕ್ತಿಯೊಡನೆ ... ಚೈತನ್ಯಯುತವಾದ, ಚಟುವಟಿಕೆಯುತವಾದ, ಅದ್ಭುತವಾದ ಬಲದೊಡನೆ ತುಂಬಿಕೊಂಡಿದ್ದೇವೆ.

ಯೇಸು ಮರಣದಿಂದ ಎದ್ದನು ಎಂಬ ಆ ಶಕ್ತಿಯ ನಿಖರವಾದ ಸ್ವಭಾವದ ಬಗ್ಗೆ ಯಾವುದೆ ಸಂಶಯವನ್ನು ಅಳಿಸಿಕೊಳ್ಳಲು - ಅದೆ ಶಕ್ತಿಯ ಮರಣವಿರುವಲ್ಲಿ ಜೀವವನ್ನು ಕೊಡುವುದಾಗಿದೆ, ಬಲಹೀನತೆಯು ಇರವಲ್ಲಿ ಬಲವನ್ನು ಕೊಡುವುದಾಗಿದೆ, ನಿಖರವಾದ ಸೋಲು ಇರುವಲ್ಲಿ

ವಿಜಯವನ್ನು ತಂದುಕೊಡುವುದಾಗಿದೆ, ಅಶಾಂತಿಯು ಇರುವಲ್ಲಿ ಸಂತೋಷವನ್ನು ಕೊಡುವುದಾಗಿದೆ. ದೇವರ ಶಕ್ತಿಯು ಇಂಥ ಪರಿಸ್ಥಿತಿಯ ಮೇಲೆ ಜಯವನ್ನು ಸಾಧಿಸಿದೆ ಮತ್ತು ಜೀವಿತವನ್ನು ಬದಲಾಯಿಸಿದೆ ಆ ಶಕ್ತಿಯು ನಮ್ಮದು ಆಗಿದೆ! ಪೌಲನು ಹೀಗೆ ಹೇಳಿದ್ದರಲ್ಲಿ ಯಾವ ಅಚ್ಚರಿಯೂ ಇಲ್ಲ,

> ... ಆತನನ್ನೂ ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನೂ ತಿಳಕೊಂಡು ... (ಫಿಲಿಪ್ಪಿ 3:10).

> ನನ್ನನ್ನು ಬಲಪಡಿಸುವಲ್ಲಿದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ (ಫಿಲಿಪ್ಪಿ 4:13).

> ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವುದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅಂತ್ಯಧಿಕವಾದದ್ದನ್ನು ಮಾಡಲು ಶಕ್ತನಾದ ದೇವರಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ. ಆಮೇನ್ (ಎಫೆಸ 3:20, 21).

ನಮ್ಮ ದಿನನಿತ್ಯದ ನಡೆಯುವಿಕೆಯಲ್ಲಿ ಆ ದಿವ್ಯ ಚೈತ್ಯನವು ಲಭ್ಯವಿರುವುದಾಗಿದೆ. ಅದನ್ನು ಅರಿತುಕೊಳ್ಳಲು ಮತ್ತು ಬಳಸಿಕೊಳ್ಳಲು ಬರಲೆಬೇಕು ಎಂಬುದೆ ಪೌಲನ ಪ್ರಾರ್ಥನೆಯಾಗಿದೆ.

*ನಾವು ಆರಾಧಿಸಲಿರುವವನನ್ನು ಉನ್ನತೀಕರಿಸುವದು.* ನಮ್ಮಿಂದ ಆರಾಧನೆ ಹೊಂದುವವನು ಯಾರು? ಇದೆಲ್ಲವನ್ನೂ ನಮಗೆ ಮಾಡುವವನು ಯಾರು? ನಾವು ಆತನನ್ನು ಅರಿತುಕೊಳ್ಳುವದು ನಿಶ್ಚಿವಾಗಿಯೂ ಅತ್ಯಗತ್ಯವಾಗಿದೆ. ಆತನು ಮಹಿಮೆಯಲ್ಲಿರುವುದನ್ನು ಗ್ರಹಿಸಲು ಆರಂಭಿಸುವತನಕ ನಾವು ಆತನಿಗಾಗಿ ಜೀವಿಸಲಾರೆವು.

> ಆತನ ಬಲಾತಿಶಯವು ಎಷ್ಟು ಮಹತ್ತಾದದ್ದೆಂಬದು ಕ್ರಿಸ್ತನಲ್ಲಿ ತೋರಿಬಂದಿದೆ. ಹೇಗೆಂದರೆ ಆತನು ಸತ್ತಿದ್ದ ಕ್ರಿಸ್ತನನ್ನೂ ಬದುಕಿಸಿ ಪರಲೋಕದೊಳಗೆ ಸಕಲ ರಾಜತ್ವ ಅಧಿಕಾರ ಮಹತ್ವ ಪ್ರಭುತ್ವದಿಗಳ ಮೇಲೆಯೂ ಈ ಲೋಕದಲ್ಲಿ ಮಾತ್ರವಲ್ಲದೆ ಬರುವ ಲೋಕದಲ್ಲಿ ಸಹ ಹೆಸರುಗೊಂಡವರ ಮೇಲೆಯೂ ತನ್ನ ಬಲಗಡೆಯಲ್ಲಿ ಕೂಡ್ರಿಸಿಕೊಂಡನು (ಎಫೆಸ 1:20, 21).

ಈ ವಿಶ್ವದಲ್ಲಿ ಯೇಸುವಿಗಿಂತ ಉನ್ನತವಾದದ್ದು ಯಾವುದೂ ಇಲ್ಲ. ಯೇಸುವಿನಂತೆ ಎಂದೆಂದಿಗೂ ಜೀವಿಸುವವನೂ ಅಥವಾ ಯೇಸುವಿಗಿಂತ ಉನ್ನತವಾಗಿ ಜೀವಿಸಿದವನು ಒಬ್ಬನೂ ಇಲ್ಲ. ಆತನು ಕೇವಲ ರಾಜರು ಮತ್ತು ಅಧಿಕಾರ, ಅಧಿಕಾರ ಮತ್ತು ಪ್ರಭುತ್ವಗಳ ಮೇಲೆ ಇರುವಾತನಲ್ಲ, ಅವೆಲ್ಲವುಗಳಿಗಿಂತಲೂ "ಉನ್ನತದವನು" ಆತನು. ಪೌಲನು ಆತನನ್ನು ಈ ರೀತಿ ಘೋಷಿಸಿದ್ದಾನೆ,

> ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಟವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು (ಫಿಲಿಪ್ಪಿ 2:9-11).

ಶಕ್ತಿ, ಅಧಿಕಾರ, ಅಥವಾ ಪ್ರಭುತ್ವಗಳು ಯೇಸುವಿಗಿಂತ ಹೆಚ್ಚಾದವುಗಳು ಅಲ್ಲ. ಎಫೆಸ 1ರಲ್ಲಿ ಪೌಲನು ಕನಿಷ್ಟ ನಾಲ್ಕು ಬಾರಿ ನಾವು ಆತನಲ್ಲಿ ಇದ್ದೇವೆ ಎಂದು ಹೇಳಿದ್ದಾನೆ.

ನಾವು ಆರಾಧಿಸುವಾತನನ್ನು ಹೇಗೆ ಉನ್ನತೀಕರಿಸಲಾಗಿದೆ ಮತ್ತು ದೇವರು ಆತನನ್ನು

ನಮಗಾಗಿ ಇಟ್ಟನು ಎಂಬದನ್ನು ನಾವು ನೋಡಿದ್ದೇವೆ, ಇದು ನಮಗೆ ಸುರಕ್ಷಿಯ ಆತ್ಮೀಕ ಸ್ವರೂಪವನ್ನು ಕೊಡುವುದಾಗಿದೆ. ಆತನು ನಮಗೋಸ್ಕರ ಮಾಡಿದ್ದರಿಂದ ನಾವು ಅಪರಿಮಿತ ವಿಶ್ವಾಸದಿಂದ ದೇವರ ಮುಂದೆ ನಮ್ಮ ದೈನಿಕ ನಡೆಯುವಿಕೆಯಲ್ಲಿ ನಾವು ಜೀವಿಸುವಾ.

*ಸಮಾರೋಪ.* ಪರಲೋಕದ ಸರ್ವಸಂಪತ್ತು ನಮಗೆ ಸಂಬಂಧಿಸಿದ್ದಾಗಿದೆ. ಆತ್ಮೀಕ ಅಸುರಕ್ಷೆಯ ಗೂಡಾಗಿರುವ ಬಲಹೀನ ಕ್ರೈಸ್ತತ್ವದೊಡನೆ, ಕ್ರಿಸ್ತನಲ್ಲಿ ಅದರ ಸ್ಥಾನದ ಖಚಿತವಿಲ್ಲದಿರುವಿಕೆಯುತ್ತ ಎಂದಿಗೂ ಇರದಿರೋಣ. ಬದಲಾಗಿ ಮಹಿಮಾಯುತವಾದ, ಒಂದು ದಿನ ಸಂಪೂರ್ಣ ನಮ್ಮದೆ ಆನಂದವಾಗಲಿರುವ ಬಾಧ್ಯತೆಯ ಆಶೀರ್ವಾದ ಹೊಂದುವಂತೆ ಮುಂದೆ ಹೇಳಲ್ಪಟ್ಟ ಅನುಭವವನ್ನು ಈಗಾಗಲೇ ಆರಂಭಿಸಿದ ದೇವರ ಮಕ್ಕಳಂತೆ ನಾವು ಜೀವಿಸುವಾ.

Chris Bullard

ಟಿಪ್ಪಣಿಗಳು

[1]Kenneth S. Wuest, *Wuest's Word Studies from the Greek New Testament for the English Reader: Ephesians and Colossians* (Grand Rapids, Mich.: Wm. B. Eerdmans Publishing Co., 1953), 51. [2]Ibid. [3]Ibid. [4]Spiros Zodhiates, ed., *The Complete Word Study New Testament,* 2d ed. (Chattanooga, Tenn.: AMG Publishers, 1992), 918. [5]S. D. F. Salmond, "The Epistle to the Ephesians," in *The Expositor's Greek Testament,* ed. W. Robertson Nicoll (Grand Rapids, Mich.: Wm. B. Eerdmans Publishing Co., 1967), 3:273. [6]Wuest, 52. [7]Andrew T. Lincoln, *Ephesians,* Word Biblical Commentary, vol. 42 (Dallas: Word Books, 1990), 56. [8]Wuest, 175. [9]Ethelbert W. Bullinger, *A Critical Lexicon and Concordance to the English and Greek New Testament* (London: Samuel Bagster and Sons, n.d.; reprint, Grand Rapids, Mich.: Zondervan Publishing House, Regency Reference Library, 1975), 436. [10]Zodhiates, 911.

[11]Wuest, 54. [12]Bullinger, 498, 593, 900. [13]Zodhiates, 912. [14]Bullinger, 422. [15]Wuest, 56. [16]Ibid. [17]Salmond, 279-80. [18]Zodhiates, 910. [19]C. G. Wilke and Wilibald Grimm, *A Greek-English Lexicon of the New Testament,* trans. and rev. Joseph Henry Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 345; see also Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick William Danker (Chicago: University of Chicago Press, 2000), 541-42. [20]Bullinger, 312.